ಐಕ್ಯರಂಗ

(ವಾರ ಪತ್ರಿಕೆ)

ಭಾರತ ಕಮ್ಯುನಿಸ್ಟ್ ಪಕ್ಷ[ಮಾರ್ಕ್ಸ್‌ವಾದಿ]ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 5 ಸಂಚಿಕೆ 12 ಮಾರ್ಚ್ 20, 1983 ಬೆಲೆ 60 ಪೈಸೆ

ಕೇಂದ್ರ ಬಜೆಟ್ :

ಜನತೆಯ ಮೇಲೆ ಹೆಚ್ಚಿನ ಹೊರೆ

1983–84 ರ ಕೇಂದ್ರ ಮುಂಗಡ ಪತ್ರವು ಜನತೆಯ ಮೇಲೆ ಮತ್ತಷ್ಟು ಭಾರವನ್ನು ಹೇರಿದೆಯೆಂಬುದಾಗಿ ಸಿ.ಪಿ.ಐ. (ಎಂ) ಪೊಲಿಟ್ ಬ್ಯೂರೋ ತನ್ನ ಪ್ರಕಟನೆಯಲ್ಲಿ ತಿಳಿಸಿದೆ.

ಮುಂಗಡ ಪತ್ರವು ಕಾಂಗ್ರೆಸ್ (ಐ) ಆಡಳಿತಗಾರರ ಜನವಿರೋಧೀ ಧೋರಣೆ ಮತ್ತು ವಿಶ್ವ ಹಣಕಾಸು ನಿಧಿಯ ಶರತ್ತುಗಳಿಂದಾಗಿ 716 ಕೋಟಿ ರೂಪಾಯಿಗಳಷ್ಟು ಹೊಸ ಲೆವಿಯನ್ನು ಹೇರುವುದರೊಂದಿಗೆ 1,555 ಕೋಟಿ ರೂಪಾಯಿಗಳಷ್ಟು ಕೊರತೆಯನ್ನು ಉಳಿಸಿದೆ. ಸೀಮೆಎಣ್ಣೆ ಮತ್ತು ಪೆಟ್ರೋಲಿಯಂ ಉತ್ಪನ್ನಗಳ ಬೆಲೆ ರೂ 800 ಕೋಟಿಯಷ್ಟು ಹೆಚ್ಚಿದೆ. ರೈಲ್ವೇ ಪ್ರಯಾಣ ದರ ಮತ್ತು ಸಾಗಾಣಿಕೆ ವೆಚ್ಚಗಳು ರೂ. 490 ಕೋಟಿಯಷ್ಟು ಹೆಚ್ಚಾಗಿದೆ. ಅಂಚೆ ಮತ್ತು ತಂತಿ ಸಮಾಚಾರಗಳಲ್ಲಿ 70 ಕೋಟಿಯಷ್ಟು ಹೆಚ್ಚಳ ಉಂಟಾಗಿದೆ. ಎಕ್ಸೈಜ್ ಲೆವಿಯಲ್ಲಿ ಹೆಚ್ಚಳ, ಸಿಗರೇಟು ಮೇಲಿನ ತೆರಿಗೆ ರಿಯಾಯಿತಿಯನ್ನು ಹಿಂತೆಗೆದುಕೊಂಡಿರುವುದು ಇವುಗಳೆಲ್ಲವೂ ಹೊಸ ಲೆವಿ ಮತ್ತು ಕೊರತೆಗಳನ್ನು ಅನುಸರಿಸಿ ಬಂದವುಗಳಾಗಿದೆ.

ಮುಂಗಡ ಪತ್ರದ ಈ ಹೊಸ ಲೆವಿಯಿಂದಾಗಿ ಒಟ್ಟು 2,816 ಕೋಟಿ ರೂಪಾಯಿಗಳಷ್ಟು ತೆರಿಗೆ ಜನಸಾಮಾನ್ಯರ ಮೇಲೆ ಬಿದ್ದಿದೆ, ಇದರ ಜೊತೆಯಲ್ಲೇ 1555 ಕೋಟಿ ರೂಪಾಯಿಗಳಷ್ಟು ದೊಡ್ಡ ಕೊರತೆಯು ಹಣದುಬ್ಬರವನ್ನು ಹೆಚ್ಚಿಸುವ ಮೂಲಕ ಮತ್ತಷ್ಟು ಬೆಲೆಯೇರಿಕೆಗೆ ಕಾರಣವಾಗುತ್ತದೆ. ಜನತೆ ಮತ್ತೊಮ್ಮೆ ಇದಕ್ಕೆ ಬಲಿಯಾಗಲಿದ್ದಾರೆ.

ಇಂಥ ದೊಡ್ಡ ಹೊರೆಯನ್ನು ಹೊರಿಸುವ ಸಂದರ್ಭದಲ್ಲೇ ಅಲ್ಲೊಂದಿಷ್ಟು ಇಲ್ಲೊಂದಿಷ್ಟು ಪರಿಹಾರಗಳನ್ನು ಬಿಟ್ಟರೆ ನಿಜವಾದ ಪರಿಹಾರವನ್ನು ಜನತೆಗೆ ಒದಗಿಸಿಲ್ಲ. ರೈತರ ಉತ್ಪಾದನಾ ವೆಚ್ಚವು ಪ್ರತಿಯೊಂದು ಹೊಸ ತೆರಿಗೆಗಳಿಂದಲೂ ಹೆಚ್ಚುತ್ತಾ ಬರುವುದರೊಂದಿಗೆ ಬೆಳೆದ ಬೆಳೆಗೆ ಸರಿಯಾದ ಬೆಲೆಯಿಲ್ಲದೆ ಅವರ ಸ್ಥಿತಿ ಚಿಂತಾಜನಕಗೊಂಡಿದೆ. ಆಂತರಿಕ ಮಾರುಕಟ್ಟೆಯ ಮೇಲೆ ಇವುಗಳು ಉಂಟುಮಾಡುವ ಪರಿಣಾಮಗಳನ್ನು ಕಾಂಗ್ರೆಸ್ (ಐ) ಆಡಳಿತಗಾರರು ಗಣನೆಗೂ ತೆಗೆದುಕೊಳ್ಳದಿರುವುದು ದುರದೃಷ್ಟಕರ.

ಜನತೆಯ ಮೇಲೆ ಭಾರೀ ಹೊರೆಯನ್ನು ಹೇರಿರುವ ಇದೇ ಸಂಧರ್ಭದಲ್ಲಿ ಏಕಸ್ವಾಮ್ಯ ಬಂಡವಾಳಗಾರರು ಮಾತ್ರ ಯಾವುದೇ ಹೊಸ ತೆರಿಗೆಗಳಿಗೂ ಒಳಗಾಗದೆ ಉಳಿದಿದ್ದಾರೆ. ಮತ್ತೊಂದು ಕಡೆ ಅವರಿಗೆ ಇನ್ನಷ್ಟು ರಿಯಾಯಿತಿಗಳನ್ನು ಕಲ್ಪಿಸಲಾಗಿರುವುದು ತುಂಬಾ ವಿಪರ್ಯಾಸ. ದೊಡ್ಡ ಬಂಡವಾಳಗಾರರಿಗೆ ಬಡ್ಡಿ ದರದಲ್ಲಿ ಇಳಿತ, ವಸ್ತುಗಳ ಸವಕಳಿಗಾಗಿ ಕೊಡುವ ಭತ್ಯೆಯಲ್ಲಿ ಏರಿಕೆ, ರಫ್ತು ವ್ಯವಹಾರಗಳಿಗೆ ಉತ್ತೇಜನ, ಆಟೋಮೋಬೈಲ್ ಉದ್ಯಮಕ್ಕೆ 210ಕೋಟಿ ರೂಪಾಯಿಗಳನ್ನು ಸಕ್ಕರೆ ಉದ್ಯಮಕ್ಕೆ 21 ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿರುವುದು ಸರ್ಕಾರದ ಧೋರಣೆಗೆ ಸಾಕ್ಷಿಯಾಗಿದೆ.

ಅರ್ಥ ವ್ಯವಸ್ಥೆಯಲ್ಲಿ ಆಳಗೊಳ್ಳುತ್ತಿರುವ ಬಿಕ್ಕಟ್ಟಿಗೆ ಪರಿಹಾರ ಒದಗಿಸುವಂತಹ ಯಾವ ಧೋರಣೆಯೂ ಈ ಮುಂಗಡ ಪತ್ರದಲ್ಲಿ ಒಳಗೊಂಡಿಲ್ಲ ಅಲ್ಲದೆ ಈ ಮುಂಗಡ ಪತ್ರವು ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸಿದೆ. ಜನಸಾಮಾನ್ಯರ ಜೀವನವನ್ನು ದುರವಸ್ಥೆಗೆ ದೂಡಿರುವ ಕಾಂಗ್ರೆಸ್ (ಐ) ಆಡಳಿತಗಾರರು ಸದಾ ಕಾಲವೂ ಇಪ್ಪತ್ತಂಶದ ಕಾರ್ಯಕ್ರಮವನ್ನೇ ಜಪಿಸುತ್ತಿರುತ್ತಾರೆ, ಆದರೆ ಗ್ರಾಮೀಣ ಬಡವರ ಚಿಂತಾಜನಕ ಸ್ಥಿತಿಯನ್ನು ಸರಿಪಡಿಸುವ ಯಾವ ಕ್ರಮಗಳೂ ಮುಂಗಡ ಪತ್ರದಲ್ಲಿ ಒಳಗೊಂಡಿಲ್ಲ.

ಜನತೆ ಮತ್ತದರ ಸಾಮೂಹಿಕ ಸಂಘಟನೆಗಳು ಮತ್ತು ವಿರೋಧ ಪಕ್ಷಗಳು ಒಗ್ಗಟ್ಟಿನಿಂದ ಇದನ್ನೂ ವಿರೋಧಿಸಬೇಕೆಂದೂ ಮತ್ತು ಮುಂಗಡಪತ್ರದಲ್ಲಿನ ಪ್ರತಿಗಾಮೀ ಧೋರಣೆಗಳನ್ನು ತೆಗೆದು ಹಾಕುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಬೇಕೆಂದೂ ಸಿ.ಪಿ.ಐ. (ಎಂ.)ನ ಪೊಲಿಟ್ ಬ್ಯೂರೋ ಕರೆ ನೀಡಿದೆ.

ಮುಖ್ಯಮಂತ್ರಿಗಳೊಂದಿಗೆ ರೈತ ಸಂಘದ ಪ್ರತಿನಿಧಿಗಳ ಮಾತುಕತೆ

ಶಾಸಕ ಪಿ. ರಾಮಚಂದ್ರರಾವ್, ಅಧ್ಯಕ್ಷರು, ಕರ್ನಾಟಕ ಪ್ರಾಂತ ರೈತ ಸಂಘ, ವಿ. ಎನ್. ಹಳಕಟ್ಟಿ, ಪ್ರ. ಕಾರ್ಯದರ್ಶಿ, ಕರ್ನಾಟಕ ಪ್ರಾಂತ ರೈತ ಸಂಘ, ಹೆಚ್. ಮುಗವಾಳಪ್ಪ, ಭೀಮಸಿ ಕಲಾದಗಿ, ಎನ್. ಲಕ್ಷ್ಮಯ್ಯ ಉಪಾಧ್ಯಕ್ಷರುಗಳು : ಪಿ. ಜಗನ್ನಾಥ್ ಕಾರ್ಯದರ್ಶಿ. ಕಲ್ಲಪ್ಪ ಕಿರಣಗಿ, ಖಜಾಂಚಿ. ಹೆಚ್. ಸಿ. ಚೆನ್ನಪ್ಪ ಎಂ. ಕೆ. ಭಟ್, ಎಸ್. ಕೆ. ಉಪಾಧ್ಯಾಯ, ಲಕ್ಷ್ಮೀರೆಡ್ಡಿ, ಲಕ್ಕಣ್ಣ ಅಶ್ವತ್ಥ ನಾರಾಯಣ ರೆಡ್ಡಿ ಮತ್ತು ಕಾರ್ಯಕಾರಿ ಸದಸ್ಯರು. ಇವರು ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯ ಪರವಾಗಿ ದಿ. 3–3–83 ರಂದು ಮಧ್ಯಾಹ್ನ 3 ಗಂಟೆಗೆ ಮಂತ್ರಿಯವರನ್ನು ಭೇಟಿಯಾಗಿ ಕರ್ನಾಟಕ ರಾಜ್ಯದ ರೈತ, ರೈತ ಕೂಲಿಕಾರರ ಮುಖ್ಯ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಸಲ್ಲಿಸಿ ಬೇಡಿಗಗಳ ಬಗ್ಗೆ ಚರ್ಚಿಸಿದರು.

ಪ್ರಧಾನ ಕಾರ್ಯದರ್ಶಿ ಕಾ. ವಿ. ಎನ್. ಹಳಕಟ್ಟಿ ಅವರು ಮಾತನಾಡಿ

(8ನೇ ಪುಟ ನೋಡಿ)

ಕಾರ್ಲ್‌ಮಾರ್ಕ್ಸ್ : ಸಂಸತ್ ಶ್ರದ್ಧಾಂಜಲಿ

ಮಹಾನ್ ಕ್ರಾಂತಿಕಾರಿ, ವೈಜ್ಞಾನಿಕ ಸಮತಾವಾದದ ಜನಕ, ಕಾರ್ಲ್‌ಮಾರ್ಕ್ಸ್‌ರ ಮರಣ ಶತಾಬ್ಧಿ ಆಚರಣೆಯ ಸಂಧರ್ಭದಲ್ಲಿ ಭಾರತದ ಸಂಸತ್ತು ತನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿತು,

ಸಂಸತ್ತಿನ ಸಭಾಧ್ಯಕ್ಷ ಶ್ರೀ ಬಲರಾಮ್ ಜಾಖಡ್ ಅವರು ಕಾರ್ಲ್ ಮಾರ್ಕ್ಸ್‌ರು ಮಾನವ ಕುಲಕ್ಕೆ ಸಲ್ಲಿಸಿದ ಮಹತ್ವದ ಸೇವೆಯನ್ನು ಸ್ಮರಿಸುತ್ತಾ, ಮಾರ್ಕ್ಸ್ ಓರ್ವ ಮಹಾನ್ ಚಿಂತಕರೂ, ವೈಜ್ಞಾನಿಕ ಸಮಾಜವಾದದ ಸ್ಥಾಪಕರೂ ಆಗಿದ್ದರು ಎಂದು ಹೇಳಿದರು.

ಕಾರ್ಲ್‌ಮಾರ್ಕ್ಸ್‌ರ ಸ್ಮರಣಾರ್ಥ ಅಂಚೆ ಚೀಟಿಯನ್ನು ಹೊರಡಿಸಬೇಕೆಂದು ಕೆಲವು ಸದಸ್ಯರು ಮಾಡಿದ ಸಲಹೆಯನ್ನು ಸರ್ಕಾರ ಒಪ್ಪಿಕೊಂಡಿರುವುದಾಗಿ ವರದಿಯಾಗಿದೆ.

ಸೀಮೆಎಣ್ಣೆ ಬೆಲೆ ಏರಿಕೆ :

ರಾಜ್ಯ ಸಮಿತಿಯ ತೀವ್ರ ಖಂಡನೆ

ಸೀಮೆಎಣ್ಣೆ ಬೆಲೆಯಲ್ಲಿ ಶೇಖಡಾ ನೂರರಷ್ಟು ಏರಿಕೆ ಆಗಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಸಮಿತಿ ತೀವ್ರವಾಗಿ ಖಂಡಿಸಿದೆ. ದೇಶದ ತೀರಾ ಬಡವರ್ಗದ ಜನತೆಯು ಉಪಯೋಗಿಸುವ ವಸ್ತುವಾಗಿರುವ ಸೀಮೆ ಎಣ್ಣೆಯ ಬೆಲೆಯನ್ನು ಸಿಕ್ಕಾಪಟ್ಟೆ ಹೆಚ್ಚಿಸಿರುವುದು ಅವರ ಬದುಕಿನ ಮೇಲೆ ಮಾಡಿರುವ ಮತ್ತೊಂದು ದೊಡ್ಡ ಪ್ರಹಾರವೆಂದು ರಾಜ್ಯ ಸಮಿತಿ ಅಭಿಪ್ರಾಯಪಟ್ಟಿದೆ.

ರೈಲ್ವೆ ಪ್ರಯಾಣ ದರದಲ್ಲಿ ಹಾಗೂ ಸಾಗಾಣಿಕೆ ವೆಚ್ಚದಲ್ಲಿ ಆಗಿರುವ ಏರಿಕೆಯನ್ನು ಸಹ ರಾಜ್ಯ ಸಮಿತಿ ಖಂಡಿಸಿದೆ. ಇದರಿಂದಾಗಿ ಮಧ್ಯಮ ವರ್ಗ ಹಾಗೂ ಬಡವರ್ಗಗಳು ತೊಂದರೆಗೊಳಗಾಗಿವೆ. ಸಾಗಾಣಿಕೆ ವೆಚ್ಚದಲ್ಲಿ ಆಗಿರುವ ಹೆಚ್ಚಳದಿಂದಾಗಿ ಅಗತ್ಯ ಸರಕುಗಳ ಬೆಲೆಗಳು ಕೂಡ ಖಂಡಿತವಾಗಿ ಹೆಚ್ಚುವುದರಿಂದ ದೇಶದ ಬಹುಸಂಖ್ಯಾತ ಜನತೆಗೆ ಇದರಿಂದ ತೀವ್ರತರ ತೊಂದರೆಗಳು ಸಂಭವಿಸುತ್ತವೆಂದು ರಾಜ್ಯ ಸಮಿತಿ ತಿಳಿಸಿದೆ.

ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿದ್ದ ಸಂಧರ್ಭದಲ್ಲೇ ಅಂಚೆ ಮತ್ತಿತರ ಏರಿಕೆಗಾಗಿ ಶ್ರೀಮತಿ ಇಂದಿರಾ ಗಾಂಧಿಯವರು ಕಾರ್ಯಾಂಗದ ಮೂಲಕ ಅನುಸರಿಸಿದ ವಿಧಾನವು ಖಂಡನೀಯವೆಂದೂ ಇದು ಅನೀತಿಯುತವಾದುದು ಮತ್ತು ಪಾರ್ಲಿಮೆಂಟಿಗೆ ಆಗಿರುವ ಅಪಮಾನವೆಂದು ಹೇಳಿಕೆ ತಿಳಿಸಿದೆ. ಮನಿಆರ್ಡರ್. ಟೆಲಿಗ್ರಾಂ ಮತ್ತು ಟೆಲಿಫೋನ್ ದರಗಳನ್ನು ಏರಿಸಿರುವುದರಿಂದಾಗಿ ಮಧ್ಯಮ ವರ್ಗ ಹಾಗೂ ಬಡವರ್ಗಗಳು ತೀರಾ ಸಂಕಷ್ಟಕ್ಕೆ ಒಳಗಾಗಿರುವುದರಿಂದ ಜನತೆಯ ಎಲ್ಲಾ ವಿಭಾಗಗಳೂ ಕೇಂದ್ರ ಸರ್ಕಾರದ ಜನ ವಿರೋಧಿ ಧೋರಣೆಯನ್ನು ಪ್ರತಿಭಟಿಸಿ ಸರ್ಕಾರವು ತನ್ನ ಧೋರಣೆಗಳನ್ನು ಬದಲಾಯಿಸಿಕೊಳ್ಳುವಂತೆ ಒತ್ತಾಯ ತರಬೇಕೆಂದು ಸಿ.ಪಿ.ಐ. (ಎಂ) ನ ರಾಜ್ಯ ಸಮಿತಿ ಕರೆನೀಡಿದೆ.

ಐದು ಪಕ್ಷಗಳ ಪ್ರತಿಭಟನೆ

ಅಲಿಪ್ತ ದೇಶಗಳ ಸಮ್ಮೇಳನದ ಸಂಧರ್ಭದಲ್ಲಿ ಮಾರ್ಚ್ 5ರಂದು ನವದೆಹಲಿಯಲ್ಲಿ ನಡೆಸಲುದ್ದೇಶಿಸಲಾಗಿದ್ದ ಮತ ಪ್ರದರ್ಶನಕ್ಕೆ ಕೇಂದ್ರ ಸರಕಾರವು ಅನುಮತಿಯನ್ನು ನಿರಾಕರಿಸಿರುವುದಕ್ಕೆ ಸಿ.ಪಿ.ಐ. (ಎಂ.) ಸಿ.ಪಿ.ಐ. ಫಾರ್ವರ್ಡ್ ಬ್ಲಾಕ್, ಆರ್.ಎಸ್.ಪಿ., ಡಿ.ಎಸ್.ಪಿ.ಗಳ ಪ್ರತಿನಿಧಿಗಳು ಹೇಳಿಕೆಯೊಂದರಲ್ಲಿ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ.

ಶಾಂತಿಯನ್ನು ಬೆಂಬಲಿಸುವುದು, ಯುದ್ಧದ ಅಪಾಯವನ್ನು ವಿರೋಧಿಸುವುದು, ಅಲಿಪ್ತ ಚಳವಳಿಯನ್ನು ಬಲಿಷ್ಠಗೊಳಿಸುವುದು ಮತ್ತು ಅಲಿಪ್ತ ಚಳವಳಿಯ ಐಕ್ಯತೆಯನ್ನು ಮುರಿಯಲು ಸಾಮ್ರಾಜ್ಯಶಾಹಿಗಳು ನಡೆಸುತ್ತಿರುವ ಪ್ರಯತ್ನಗಳನ್ನು ಬಯಲಿಗೆಳೆಯುವುದು ಪ್ರದರ್ಶನದ ಮೂಲ ಉದ್ದೇಶವಾಗಿತ್ತು.

ಸಮ್ಮೇಳನದ ಅವಧಿಯ ಪೂರ್ತಿ ನಿಷೇಧಾಜ್ಞೆ ಜಾರಿ ಮಾಡಲಾಗಿರುವುದರಿಂದ ಪ್ರದರ್ಶನಕಾರರಿಗೋಸ್ಕರ ಇದನ್ನು ಸಡಿಲಿಸಲಾಗುವುದಿಲ್ಲವೆಂಬ ಕಾರಣದ ಮೂಲಕ ಅನುಮತಿಯನ್ನು ನಿರಾಕರಿಸಲಾಯಿತು. ನಿಷೇಧಾಜ್ಞೆಯನ್ನು ನಾವು ಪ್ರತಿಭಟಿಸುತ್ತೇವೆ, ಏಕೆಂದರೆ ಪ್ರದರ್ಶನ ನಡೆಸುವುದರಿಂದ ಶಾಂತಿಗಾಗಿ. ಸಾಮ್ರಾಜ್ಯಶಾಹಿಗಳಿಗಿದಿರಾಗಿ ಮತ್ತು ಅಲಿಪ್ತ ಚಳವಳಿಗಾಗಿ ಹೋರಾಟ ನಡೆಸುತ್ತಿರುವ ಶಕ್ತಿಗಳನ್ನು ಮತ್ತಷ್ಟು ಬಲಿಷ್ಠಗೊಳಿಸಲು ಸಾಧ್ಯವಾಗುವುದೆಂದು ನಾವು ಭಾವಿಸುತ್ತೇವೆ.

ಎಂಬುದಾಗಿ ಐದು ಪಕ್ಷಗಳ ಪ್ರತಿನಿಧಿಗಳು ಪ್ರಕಟನೆಯಲ್ಲಿ ತಿಳಿಸಿದ್ದಾರೆ.

ಆರ್. ಚಂದ್ರ

ಆರ್ಥಿಕ ಸಮೀಕ್ಷೆ:

ಮುಂಗಡ ಪತ್ರದ ಹಿನ್ನೋಟ

ಸಂಸತ್ತಿಗೆ ಅವಮಾನ: ಇಂದಿರಾ ಗಾಂಧಿ ಕಾಂಗ್ರೆಸ್ ಆಳ್ವಿಕೆಯಲ್ಲಿ ಮುಂಗಡ ಪತ್ರ-ಸರಕಾರದ ಆಯುವ್ಯಯಗಳ ಅಂದಾಜು ಪತ್ರ—ತನ್ನ ಪ್ರಾಮುಖ್ಯತೆಯನ್ನೇ ಕಳೆದುಕೊಳ್ಳುತ್ತಿದೆ. ಸಂಸತ್ತು ಅಧಿವೇಶನದಲ್ಲಿಲ್ಲದ ಅವಧಿಯಲ್ಲಿ ವರ್ಷದ ಉದ್ದಕ್ಕೂ ಬೇಕೆಂದಾಗಲೆಲ್ಲಾ, ಹೆಚ್ಚಾಗಿ ಸಂಸತ್ತಿನ ಮುಂಗಡ ಪತ್ರದ ಅಧಿವೇಶನದ ಕೆಲಕಾಲದ ಮುಂಚೆಯೇ ಸರಕಾರ ರೈಲು ಸಾರಿಗೆ, ಅಂಚೆ ತಂತಿ, ಪೆಟ್ರೋಲಿಯಂ, ಉಕ್ಕು, ಕಲ್ಲಿದ್ದಲು, ಗೊಬ್ಬರ, ಇತ್ಯಾದಿಗಳ ದರಗಳನ್ನು ಏಕ ಪಕ್ಷೀಯವಾಗಿ ಹೆಚ್ಚಿಸಿ ಅಪ್ರತ್ಯಕ್ಷ ತೆರಿಗೆಯನ್ನು ಜನರ ಮೇಲೆ ಹೇರಿಸುತ್ತಿದೆ. ಸಂಸತ್ತಿಗೆ ಅವಮಾನ ಮಾಡುತ್ತಿದೆ. ವೆಚ್ಚದಲ್ಲಿಯೂ ಸರಕಾರ ಸಂಸತ್ತಿನಲ್ಲಿ ಅಂಗೀಕೃತವಾದ ಮುಂಗಡ ಪತ್ರಕ್ಕನುಗುಣವಾಗಿ ನಿಯತ್ತಿನಲ್ಲಿರುವುದಿಲ್ಲ. ಮಿತಿ ಮೀರಿದ ವೆಚ್ಚ, ಮಧ್ಯಕಾಲೀನ ಹೆಚ್ಚುವರಿ ವೆಚ್ಚಗಳ ಮಂಡನೆ, ಕೊರತೆ, ಇತ್ಯಾದಿ ಆರ್ಥಿಕ ಅಶಿಸ್ತುಗಳು ನಡೆಯುತ್ತಲೇ ಇವೆ. 1983–84 ರ ಮುಂಗಡ ಪತ್ರದ ಮುಂಚಿನ ದಿನಗಳಲ್ಲಿಯೂ ಹಿಂದಿನ ಕೆಟ್ಟ ಸಂಪ್ರದಾಯವೇ ಮುಂದುವರಿದಿದೆ!

ಪೆಟ್ರೋಲಿಯಂ ಬೆಲೆ ಏರಿಕೆ : ತಾ. 18–2-83 ರಂದು ಸಂಸತ್ತಿನ ಮುಂಗಡ ಪತ್ರದ ಅಧಿವೇಶನ ಪ್ರಾರಂಭ. ತಾ॥ 28–2–83 ರಂದು 1983-84ರ ಮುಂಗಡ ಪತ್ರ ಸಂಸತ್ತಿನಲ್ಲಿ ಮಂಡಿಸಬೇಕಾಗಿತ್ತು. ಆದರೆ, ಕೆಲವೇ ದಿನಗಳ ಮುಂಚೆ ತಾ. 14-2-83ರಂದು ರೂ. 8 ಕೋಟಿಯಷ್ಟು ವಾರ್ಷಿಕ ಆದಾಯ ಬರುವಂತೆ ಸೀಮೆ ಎಣ್ಣೆ, ಡೀಸೆಲ್ ಮುಂತಾದ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನೇರಿಸಿ ಸರಕಾರ ಪುನಃ ಸಂಸತ್ತಿಗೆ ಅವಮಾನಗೊಳಿಸಿದೆ. 1981ರಲ್ಲಿಯೂ ಸಂಸತ್ ಅಧಿವೇಶನದ ಮುಂಚೆಯೇ ರೂ. 1,000 ಕೋಟಿಯಷ್ಟು ವಾರ್ಷಿಕ ಆದಾಯ ಬರುವಂತೆ ಪೆಟ್ರೋಲಿಯಂ ಬೆಲೆಗಳನ್ನೇರಿಸಲಾಗಿತ್ತು. ಯಾಕೆ ಇಷ್ಟು ಅವಸರ?

ಅವಶ್ಯಕ ವಸ್ತುಗಳ ಸೇವಾ ಸೌಲಭ್ಯಗಳ ಬೆಲೆ ಏರಿಸಿ ಜನರಮೇಲೆ ಅಪ್ರತ್ಯಕ್ಷ ತೆರಿಗೆ ಭಾರ ಮೊದಲೇ ಹೇರಿಸಿ ಮುಂಬರುವ ಮುಂಗಡ ಪತ್ರದಲ್ಲಿ ಹೆಚ್ಚು ತೆರಿಗೆಹೇರಲಿಲ್ಲ ಎಂದು ತೋರಿಸುವ ಉಪಾಯ ಇದಾಗಿದೆ.ಕೃಷಿ,ಕೈಗಾರಿಕೆ ಸಾರಿಗೆ,ಗೃಹಕೃತ್ಯಗಳಿಗೆ ಅತ್ಯಗತ್ಯವಾದ ಪೆಟ್ರೋಲಿಯಂ ಪದಾರ್ಥಗಳ ಬೆಲೆಗಳನ್ನೇರಿಸುವುದರಿಂದ ಸರ್ವತ್ರ ಎಲ್ಲಾ ಜೀವನಾವಶ್ಯಕ ವಸ್ತುಗಳ ಸೇವಾಸೌಲಭ್ಯಗಳ ಬೆಲೆಗಳೂ ಏರುವುವು. ಅಪ್ರತ್ಯಕ್ಷ ತೆರಿಗೆಗಳ ಬಲೆಯೂ ವಿಸ್ತಾರವಾಗುವುದು. ಆದರೆ ಮುಂಗಡ ಪತ್ರದಲ್ಲಿರಬಹುದಾದ ಹೊಸ ತೆರಿಗೆಗಳಿಂದ ಬೆಲೆ ಏರಲಾರವು ಎಂದು ಸರಕಾರಿ ತಜ್ಞರು, ರಾಜಕೀಯ ಪುಢಾರಿಗಳು ವಾದಿಸಿ ಜನರನ್ನು ಮೋಸಗೊಳಿಸುವ ಉಪಾಯ ಇದಾಗಿದೆ!

ಸೀಮೆಎಣ್ಣೆ ಲೀಟರಿಗೆ ಪಡಿತರ ಅಂಗಡಿಗಳಲ್ಲಿ ಹೊಸದರ ರೂ. 1–85 ಮುಕ್ತ ಮಾರುಕಟ್ಟೆಯಲ್ಲಿ ಹೊಸ ದರ ಲೀಟರಿಗೆ ರೂ. 3–25. ಪಡಿತರ ಅಂಗಡಿಗಳಲ್ಲಿ ಸೀಮೆಎಣ್ಣೆಯ ಸಾರ್ವಜನಿಕ ವಿತರಣೆಯು ತೃಪ್ತಿಕರವಾಗಿರದೆ ಕೃತಕ ಕೊರತೆಯಿಂದಾಗಿ, ಮುಕ್ತ ಮಾರುಕಟ್ಟೆಗಳಲ್ಲಿ ವ್ಯಾಪಾರಿಗಳು ದಳ್ಳಾಳಿಗಳು ಭಾರೀ ಲಾಭ ಗಿಟ್ಟಿಸುವ ಸಂಭವವಿದೆ! ತೈಲೋದ್ಯಮಕ್ಕೆ 6ನೇ ಯೋಜನೆಯಲ್ಲಿ ರೂ. 7,000ಕೋಟಿ ಹೊಸ ಬಂಡವಾಳ ಹೂಡುವಿಕೆಯ ಕಾರ್ಯಕ್ರಮವಿದ್ದು, ಹೆಚ್ಚಿನ ಸಂಪನ್ಮೂಲಗಳನ್ನು ಪೆಟ್ರೋಲಿಯಂ ಪದಾರ್ಥಗಳ ಬೆಲೆ ಏರಿಸಿ ಗ್ರಾಹಕರಿಂದಲೇ ಸಂಗ್ರಹಿಸುವ ವಿಧಾನ ಎಷ್ಟು ನ್ಯಾಯ ಸಮ್ಮತವಾದುದು? ಬಡವರು, ಮಧ್ಯಮ ವರ್ಗದವರು, ರೈತರು, ಸಣ್ಣ ಉದ್ದಿಮೆಗಾರರು ಪೆಟ್ರೋಲಿಯಂ ಪದಾರ್ಥಗಳ ಮೇಲೆ ವಿಧಿಸಿದ ಹೊಸ ತೆರಿಗೆ ಭಾರವನ್ನು ಸಹಿಸಲಾರರು. ಪರಿಣಾಮವಾಗಿ ಒಂದೆಡೆ ಕೃಷಿ ಹಾಗೂ ಕೈಗಾರಿಕಾ ಉತ್ಪಾದನೆ ಇನ್ನಷ್ಟು ಸ್ಥಗಿತಗೊಳ್ಳುವುದು, ಇನ್ನೊಂದೆಡೆ ನಿರುದ್ಯೋಗ ಬೆಲೆ ಏರಿಕೆ ಹೆಚ್ಚಿ ಜನರ ಜೀವನ ಮಟ್ಟ ಇನ್ನಷ್ಟು ಹದಗೆಡುವುದು. ಯೋಜನೆಯ ವಿವಿಧೋದ್ದೇಶಗಳನ್ನು ಸಾಧಿಸಲಸಾಧ್ಯವಾಗುವುದು॥ **ಕೊರತೆ, ಯೋಜನಾ ವೆಚ್ಚದಲ್ಲಿ ಕಡಿತ:** 1982-83ರ ಮುಂಗಡ ಪತ್ರದಲ್ಲಿ ಕೇಂದ್ರ ಸರಕಾರದ ಕೊರತೆ (ಆದಾಯಕ್ಕಿಂತ ವೆಚ್ಚ ಹೆಚ್ಚು) ರೂ. 1,500 ಕೋಟಿ ಎಂದು ಅಂದಾಜು ಮಾಡಲಾಗಿತ್ತು, ಆದರೆ. ಏಪ್ರಿಲ್ 82 ರಿಂದ ಡಿಸೆಂಬರ್ 82 ರವರೆಗಿನ ಒಂಭತ್ತು ತಿಂಗಳ ಅವಧಿಯ ಆಯವ್ಯಯಗಳನ್ನು ಪರಿಶೀಲಿಸಿದರೆ,ಕೇಂದ್ರ ಸರಕಾರದ ಕೊರತೆ ರೂ. 5,000 ಕೋಟಿಗೂ ಮೀರಬಹುದೆಂಬ ಭಯವಿದೆ! 1983–84ರ ಮುಂಗಡ ಪತ್ರ ಸಮೀಪಿಸುತ್ತಿದ್ದಾಗ ದೇಶಾದ್ಯಂತ ಸರಕಾರದ ವಿರುದ್ಧ ಟೀಕೆ ಕಡಿಮೆ ಮಾಡಲು ಅವಸರವಾಗಿ ಬಾಹ್ಯಾಲಂಕಾರಗೊಳಿಸಿ ಆಯುವ್ಯಯಗಳನ್ನು ಹೇಗಾದರೂ ಮಾಡಿ ಸರಿದೂಗಿಸಲು ಪ್ರಯತ್ನಿಸಲಾಯಿತು. ಅದಕ್ಕಾಗಿಯೇ ರಾಜ್ಯ ಸರ್ಕಾರಗಳು ತಮ್ಮ ಓವರ್ ಡ್ರಾಫ್ಟ್‌ಗಳನ್ನು ತತ್‌ಕ್ಷಣ ಹಿಂತಿರುಗಿಸಬೇಕೆಂದೂ ಆದೇಶ ನೀಡಿರುವುದು. ಆದರೆ, ಕಾಂಗ್ರೆ ಆಳ್ವಿಕೆಯ ಕೆಲವು ರಾಜ್ಯ ಸರ್ಕಾರಗಳಿಗೆ ಇತ್ತೀಚೆಗೆ ನಡೆದ ಚುನಾವಣೆಗಳ ಮುಂಚೆ ಪರೋಕ್ಷವಾಗಿ ಕೇಂದ್ರ ಓವರ್ ಡ್ರಾಫ್ಟ್ ಸವಲತ್ತುಗಳನ್ನು ಕೊಟ್ಟಿತ್ತು.

ಯೋಜನೆಯೇತರ ವಿಷಯಗಳಿಗೇ ಕೇಂದ್ರದ ಖರ್ಚುಗಳು ವಿಪರೀತವಾಗುತ್ತಿವೆ. ಬೇಜವಾಬ್ದಾರಿಯದ್ದಾಗುತ್ತಿವೆ. ಮುಂಗಡ ಪತ್ರದ ಸೂಚನೆಗಳಿಗೂ, ವಾಸ್ತವವಾಗಿ ಖರ್ಚು ಮಾಡುವುದಕ್ಕೂ ಯಾವ ಸಂಬಂಧವೂ ಇಲ್ಲ. ಈಗಾಗಲೇ ಹೆಚ್ಚುವರಿ ವೆಚ್ಚಕ್ಕೆ ಸಂಸತ್ತಿನ ಮಧ್ಯಕಾಲದ ಅಧಿವೇಶನದಲ್ಲಿ ಅಂಗೀಕಾರ ಪಡೆದಿದ್ದಾಯಿತು. ಇನ್ನೊಮ್ಮೆ ಇನ್ನಷ್ಟು ವೆಚ್ಚಕ್ಕೆ ಅಂಗೀಕಾರ ಪಡೆಯಬೇಕಾಗಿದೆ. ಪೊಳ್ಳು ಹೆಗ್ಗಳಿಕೆಗಾಗಿ ಏಷ್ಯಾಡ್ ಕ್ರೀಡೋತ್ಸವಕ್ಕಾಗಿಯೆ ರೂ. 1700 ಕೋಟಿಯಷ್ಟು ಹಣ ಪೋಲುಮಾಡಿದ್ದು ಇಂದಿರಾ ಸರ್ಕಾರದ ಬೇಜವಾಬ್ದಾರಿತನಕ್ಕೆ ದೊಡ್ಡ ಸಾಕ್ಷಿ.

ಪರಿಣಾಮ? ಗೊತ್ತು ಗುರಿ ಇಲ್ಲದೆ ಎಲ್ಲ ಮಂತ್ರಿಶಾಖೆಗಳ ವೆಚ್ಚದಲ್ಲಿ ಶೇ. 15ರಿಂದ 20ರ ವರೆಗೆ ವೆಚ್ಚ ಕಡಿಮೆಗೊಳಿಸಲು ಕಡೆಕಾಲದಲ್ಲಿ ನಿರ್ಧಾರ.

ಆರನೇ ಯೋಜನೆಯ 1983-84ರ ವೆಚ್ಚದಲ್ಲಿ ಭಾರಿ ಕಡಿತ. ಹಿಂದಿನ ಅನುಭವದಂತೆ, ಇಂತಹ ನಿರ್ಧಾರಗಳಿಂದ ಸರ್ಕಾರದ ಆಡಳಿತ ವೆಚ್ಚಗಳಿಗೆ ಹೆಚ್ಚಿನ ಪರಿಣಾಮವಾಗದೆ, ಅಭಿವೃದ್ಧಿ ಕಾರ್ಯಗಳ ಯೋಜನಾ ವೆಚ್ಚಗಳಿಗೇ ಕತ್ತರಿ ಪ್ರಯೋಗವಾಗಲಿದೆ. ಇದರಿಂದ ಉತ್ಪಾದನೆ, ಉದ್ಯೋಗಾವಕಾಶ ಇನ್ನಷ್ಟು ಸ್ಥಗಿತಗೊಳ್ಳಲಿದೆ, ಇಳಿಮುಖವಾಗಲಿದೆ.

ಸರ್ಕಾರದ ಇನ್ನೊಂದು ಬೇಜವಾಬ್ದಾರಿಯೆಂದರೆ, ರಾಜಕೀಯ ಕಾರಣಗಳಿಗಾಗಿ ಚುನಾವಣೆ ಹತ್ತಿರ ಬರುತ್ತಿದ್ದಂತೆ, ಮತದಾರರನ್ನು ಮರುಳುಗೊಳಿಸಲು ಹತ್ತಾರು ಅಭಿವೃದ್ಧಿ ಯೋಜನೆಗಳನ್ನು ಪ್ರಾರಂಭಿಸಿ ನಂತರ ಕೈ ಬಿಡುವುದು. ಉದಾಹರಣೆ– ವಿಜಯನಗರ ಉಕ್ಕು ಸ್ಥಾವರದ ಕೆಲಸ ಪ್ರಾರಂಭವಾಗಿ ಹತ್ತು ವರ್ಷಗಳಾದರೂ ಪೂರ್ಣಗೊಳ್ಳಲೇ ಇಲ್ಲ. ಅಪೂರ್ಣಗೊಂಡ ನೂರಾರುಯೋಜನೆಗಳಿಂದ ಸರ್ಕಾರದ ವೆಚ್ಚ ಹೆಚ್ಚುವುದೇ ಹೊರತು, ಉತ್ಪಾದನೆ, ಆರ್ಥಿಕ ಅಭಿವೃದ್ಧಿಯಾಗುವುದಿಲ್ಲ.

1982-83ರ ಆಯುವ್ಯಯುಗಳನ್ನು ಸರಿತೂಗಿಸಲು ಸರ್ಕಾರ ಕೈಗೊಂಡ ಇನ್ನೊಂದು ತುರ್ತಿನ ಕ್ರಮ–ಸಾರ್ವಜನಿಕ ಕ್ಷೇತ್ರದ ಕೈಗಾರಿಕಾ ಸಂಸ್ಥೆಗಳು ಹೇಗಾದರೂ ಮಾಡಿ ಈ ವರ್ಷ ಲಾಭ ತೋರಿಸಬೇಕೆಂದೂ, ಆದರೆ ತತ್‌ಕ್ಷಣ ಅವುಗಳು ಕೇಂದ್ರ ಸರ್ಕಾರದಿಂದ ಪಡೆದ ಸಾಲಗಳನ್ನು ಮರುಪಾವತಿ ಮಾಡಬೇಕೆಂದೂ ನೀಡಿದ ಆದೇಶ ಅಭಿವೃದ್ಧಿ ಸಾಲ ಮರುಪಾವತಿ ಮಾಡುವುದೂ, ಅಭಿವೃದ್ಧಿ ಹೆಚ್ಚಿಸಿ ಲಾಭ ತೋರಿಸುವುದೂ ಪರಸ್ಪರ ವಿರುದ್ಧ ಉದ್ದೇಶಗಳು. ಈ ಹೊಸ ಆದೇಶದಿಂದ ಸಾರ್ವಜನಿಕ ಸಂಸ್ಥೆಗಳು ಹಣಕಾಸು ಸಂಸ್ಥೆಗಳ, ವಾಣಿಜ್ಯ ಬ್ಯಾಂಕುಗಳ ಅಧಿಕ ಬಡ್ಡಿ ಸಾಲಗಳಿಗೆ ಮೊರೆ ಹೋಗಬೇಕಾವುದು. ಆಗಲೂ ಸರಕಾರದಿಂದ ಆಯುವ್ಯಯುಗಳ ಕೊರತೆ ಕಡಿಮೆ ಆದರೂ ಅದರ ವಾಣಿಜ್ಯಸಾಲ ಹೆಚ್ಚುವುದು. ವೆಚ್ಚ ಕಡಿಮೆಯಾಗಬೇಕು, ಕೊರತೆ ಮತ್ತು ಸಾಲ ಮಿತವಾಗಿರಬೇಕೆಂಬ ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯ (I.M.F.) ಶರತ್ತುಗಳನ್ನು ಪಾಲಿಸಲು ಸರ್ಕಾರಕ್ಕೆ ಕಷ್ಟವಾಗುತ್ತಿದೆ. ಸರಕಾರ ಹಣಕಾಸು ಅವ್ಯವಸ್ಥೆಯಿಂದ ತೀವ್ರವಾಗಿ ಮುಗ್ಗರಿಸುತ್ತಿದೆ.

ವಿದೇಶೀ ವ್ಯಾಪಾರದಲ್ಲಿ ಕೊರತೆ : 1982-83ರಲ್ಲಿ ರಫ್ತುರೂ. 8500 ಮಿರಲಾರದು. ಆದರೆ, ಆಮದು ರೂ. 1500ಕೋಟಿಯಷ್ಟಾಗಬಹುದು ಪರಿಣಾಮವಾಗಿ ವಿದೇಶಿ ವ್ಯಾಪಾರದಲ್ಲಿ ರೂ. 6500 ಕೋಟಿಗೆ ಕೊರತೆಯುಂಟಾಗಬಹುದು. ಈ ಕೊರತೆಯಿಂದಾಗಿ ವಿದೇಶಿ ವಿನಿಮಯ ಸಮಸ್ಯೆಯು ಇನ್ನಷ್ಟು ಗಂಭೀರವಾಗುವುದು. ಇದನ್ನು ನೀಗಿಸಲು ಅಂತರ ರಾಷ್ಟ್ರೀಯ ಹಣಕಾಸು ಸಂಸ್ಥೆಯಿಂದ ಮೂರು ವರ್ಷಗಳ ಅವಧಿಯಲ್ಲಿ ಅದರ ಎಲ್ಲ ಶರತ್ತುಗಳಿಗೂ ಮಣಿದು ರೂ. 5500 ಕೋಟಿ ಬೃಹತ್ ಸಾಲ ಮಾಡಿದ್ದಾಯಿತು. ಈ ವರ್ಷ ಆ ಸಂಸ್ಥೆಯಿಂದ ಕಡಿಮೆ ಕಂತಿನ ಸಾಲವನ್ನು ಸರಕಾರ ಪಡೆಯಲಿದೆ. ಜೊತೆಗೆ ಇತ್ತೀಚಿನ ವರ್ಷಗಳಲ್ಲಿ ಅಂತರ ರಾಷ್ಟ್ರೀಯ ಮಾರುಕಟ್ಟೆಯಿಂದ ಸರಕಾರ ಭಾರಿ ಬಡ್ಡಿಯಲ್ಲಿ ಪ್ರತಿ ವರ್ಷ ರೂ. 1000ಕೋಟಿ ಸಾಲ ಎತ್ತುತ್ತಿದೆ ಈ ದಶಕದ ಅಂತ್ಯದಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಸಂಸ್ಥೆಯ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯ ಸಾಲಗಳ ಮೊತ್ತ ಬಡ್ಡಿಯೂ ಸೇರಿ ರೂ. 10,000 ಕೋಟಿಗೂ ಮೀರುವ ಸಂಭವವಿದೆ. ಇಷ್ಟೊಂದು ಋಣ ಭಾರವನ್ನು ತೀರಿಸುವಷ್ಟು ನಮ್ಮ ರಫ್ತು ವ್ಯಾಪಾರ ಹೆಚ್ಚುತ್ತಿಲ್ಲ ಆಮದು ಕಡಿಮೆ ಆಗುತ್ತಿಲ್ಲ, ಹೊಸ ವಿದೇಶಿ ಸಾಲವೂ ಸಿಗುತ್ತಿಲ್ಲ. ಸಾಲ ಭಾರದಿಂದ ದೇಶ ದಿವಾಳಿಯಾಗುತ್ತಿದೆ. ಸಾಲ ಕೊಟ್ಟವರ ಶರತ್ತುಗಳಿಗೆ ಮಣಿದು ದೇಶದ ಸ್ವಾತಂತ್ರ್ಯ, ಸ್ವಾವಲಂಬನೆ, ಸಾರ್ವಭೌಮತೆ ನಷ್ಟವಾಗುತಿದೆ. ಉತ್ಪಾದನೆ, ರಫ್ತು ಸಾಲಕ್ಕಾಗಿಯೇ ಮೀಸಲಾಗುತ್ತಿದ್ದು ಅಭಿವೃದ್ಧಿ ಕಾರ್ಯಗಳಿಗೆ ಸಂಪನ್ಮೂಲಗಳ ಭಾರೀ ಕೊರತ ಉಂಟಾಗುತ್ತದೆ.

ತೆರಿಗೆ ಆದಾಯದಲ್ಲಿ ಇಳಿಮುಖ :

1982-83ರ ಮೊದಲ ಒಂಭತ್ತು ತಿಂಗಳ ಅನುಭವದಂತೆ, ಕೇಂದ್ರ ಸರಕಾರದ ತೆರಿಗೆ ಆದಾಯ ನಿರೀಕ್ಷೆಗಿಂತ ಬಹಳ ಕಡಿಮೆ ಆಗಿದೆ. ಅಬಕಾರಿ ಮತ್ತು ಸುಂಕದ ತೆರಿಗೆಗಳ (excise and customs duties) ಈ ಅವಧಿಯಲ್ಲಿ ಅನುಕ್ರಮವಾಗಿ ಶೇ. 5.9 ಮತ್ತು ಶೇ. 14.2 ರಷ್ಟು ಹೆಚ್ಚಾಗಿದ್ದರೂ, ಆದಾಯ ಮತ್ತು ಕಂಪೆನಿ ತೆರಿಗೆಗಳ ವಸೂಲಿ ಶೇ 4.2 ರಷ್ಟು ಕಡಿಮೆ ಆಗಿದೆ. 1982 ರಲ್ಲಿ ತೆರಿಗೆಕಳ್ಳರ ವಿರುದ್ಧ 1000 ಧಾಳಿಗಳು ನಡೆದಿದ್ದರೂ ಫಲಿಸದೇ ಇರಲು ಕಾರಣವೇನು ? ರಾಜಕೀಯ ಪುಢಾರಿಗಳ, ಆಡಳಿತಾಧಿಕಾರಿಗಳ, ಕೈಗಾರಿಕೋದ್ಯಮಿಗಳ ಒಳಗಿನ ಪಿತೂರಿ, ಕೈವಾಡಗಳೇ ತೆರಿಗೆ ಆದಾಯದಲ್ಲಿ ಇಳಿಮುಖವಾಗಲು ಕಾರಣ. ಕೈಗಾರಿಕಾಭಿವೃದ್ಧಿಗೆ ಸರಕಾರ ನೀಡುತ್ತಿರುವ ತೆರಿಗೆ ರಿಯಾಯಿತಿಗಳಿಂದ ಖಾಸಗೀ ಉದ್ಯಮಿಗಳ ಲಾಭ

(7ನೇ ಪುಟ ನೋಡಿ)

1983-84ರ ಮುಂಗಡ ಪತ್ರ

ರೂ. 2100 ಕೋಟಿ ಹೊಸ ಕರಭಾರ

	(ಕೋಟಿಗಳಲ್ಲಿ) ರೂ. ಗಳು
* ಮುಂಗಡ ಪತ್ರ ಮಂಡಿಸುವ ಕೆಲವೇ ದಿನಗಳ ಮೊದಲು ಪೆಟ್ರೋಲಿಯಂ ಪದಾರ್ಥಗಳ ದರ ಏರಿಕೆ	800
* ಅಂಚೆ ಮತ್ತು ತಂತಿ ದರಗಳ ಏರಿಕೆ.	70
* ರೈಲ್ವೆ ಪ್ರಯಾಣ ದರಗಳ ಏರಿಕೆ	179
* ರೈಲ್ವೆ ಸಾರಿಗೆ ದರಗಳ ಏರಿಕೆ	310
* ರಫ್ತು, ಆಮದು ವಸ್ತುಗಳ ಮೇಲಿನ ಸುಂಕ	393
* ಸಿಮೆಂಟ್, ಸಿಗರೇಟ್. ಕಾಗದ ಇತ್ಯಾದಿ ವಸ್ತುಗಳ ಮೇಲೆ ಅಬಕಾರಿ ತೆರಿಗೆ ಹೆಚ್ಚಳ	325
* ಆಸ್ತಿ ಆದಾಯದ ಮೇಲಿನ ತೆರಿಗೆ ಹೆಚ್ಚಳ	102
* ಬಂಡವಾಳಶಾಹಿಗಳಿಗೆ ತೆರಿಗೆ ವಿನಾಯಿತಿ	104
* ರಕ್ಷಣೆ, ಆಡಳಿತ ವೆಚ್ಚಗಳಲ್ಲಿ ಏರಿಕೆ	
* ಏಕ ಪಕ್ಷೀಯವಾಗಿ ಕೇಂದ್ರ ಸರ್ಕಾರಿ ನೌಕರರ ಮೇಲೆ ನಾಲ್ಕನೇ ವೇತನ ಆಯೋಗ ಹೇರಿಕೆ	

[ಮುಂಗಡ ಪತ್ರದ ಕುರಿತು ಸವಿಮರ್ಶೆ ಮುಂದಿನ ಸಂಚಿಕೆಗಳಲ್ಲಿ —ಸಂ.]

ರೈತ ಸಂಘದ ಚಟುವಟಿಕೆಗಳು

ಕರಾವಳಿಯಲ್ಲಿ ರೈತ ಸಂಘಟನೆ ಬೆಳೆಸಲು ಕರೆ

ಕರ್ನಾಟಕ ರಾಜ್ಯದ ಕರಾವಳಿಯಲ್ಲಿ ಮಂಗಳೂರು ಮತ್ತು ಕಾರವಾರಗಳ ಮಧ್ಯೆ ಇರುವ ದ. ಕ. ಜಿಲ್ಲೆಯ ಉತ್ತರ ಭಾಗದ ಕುಂದಾಪುರ ತಾಲೂಕಿನಲ್ಲಿ ಬಲಿಷ್ಟವಾದ ರೈತ ಸಂಘಟನೆಯನ್ನು ಕಟ್ಟಿ, ಪ್ರಬಲ ಚಳುವಳಿಗಳನ್ನು ನಡೆಸಿ ರಾಜ್ಯದ ಕರಾವಳಿಯುದ್ದಕ್ಕೂ ಬೃಹತ್ ರೈತ ಸಂಘಟನೆಯನ್ನು ಬೆಳಸಲು ಮುಂದಾಗಲು ರೈತ ಮುಖಂಡ ಕಾ. ಎಂ. ಕೆ. ಭಟ್ ಅವರು ಕರೆ ಇತ್ತರು. ತಾ. 13-2-83 ರಂದು ಕುಂದಾಪುರದಲ್ಲಿ ಸೇರಿದ್ದ ರೈತ ಸಂಘದ ತಾಲೂಕು ಸಮಿತಿ ಸಭೆಯಲ್ಲಿ ಮಾತನಾಡುತ್ತಿದ್ದ ಕಾ. ಎಂ. ಕೆ. ಅವರು ರಾಜ್ಯದಲ್ಲಿ ಬದಲಾಗಿರುವ ರಾಜಕೀಯ ಪರಿಸ್ಥಿಯನ್ನು ವಿವರಿಸಿ ಸಂಘಟನೆಯನ್ನು ರಾಜ್ಯದಾದ್ಯಂತ ಬೆಳಸುವುದಕ್ಕಾಗಿ ಪ್ರಾಂತ ರೈತ ಸಂಘದ ರಾಜ್ಯ ಸಮಿತಿಯು ತೆಗೆದುಕೊಂಡಿರುವ ನಿರ್ಣಯಗಳನ್ನು ವಿವರಿಸಿದರು. ರೈತ ಸಂಘಟನೆಯನ್ನು ಕಟ್ಟುವುದಕ್ಕೆ ಕಾರ್ಮಿಕ ಸಂಘಟನೆಗಳು ಮತ್ತು ಅವುಗಳ ಮುಂದಾಳುಗಳ ಸಹಕಾರವನ್ನು ಕೋರಿದ ಎಂ. ಕೆ. ಅವರು ಕಾರ್ಯಕರ್ತರು ಮತ್ತು ಮುಂದಾಳುಗಳು ಹಳ್ಳಿಗಳಿದು ಸಂಘಟನೆ ಕಟ್ಟಲು ಕರೆ ಇತ್ತರು. ಹಳ್ಳಿಯ ಅತ್ಯಂತ ಬಡಜನರ ವರ್ಗ ಹೋರಾಟವನ್ನು ಬೆಳೆಸುವುದರ ಮತ್ತು ರಾಜಕೀಯ ಪ್ರಜ್ಞೆ ಬೆಳಸುವುದರ ಅಗತ್ಯವನ್ನು ಒತ್ತಿ ಹೇಳಿದ ಎಂ. ಕೆ. ಅವರು ಐಕ್ಯರಂಗ ಪತ್ರಿಕೆ ಮತ್ತಿತರ ಪ್ರಗತಿಪರ ಸಾಹಿತ್ಯಗಳನ್ನು ಹಳ್ಳಿಗಳಿಗೆ ತಲುಪಿಸಲು ಒತ್ತಾಯಿಸಿದರು.

ಬಂಟ್ವಾಳದಲ್ಲಿ ರೈತ ಸಂಘದ ಸಭೆ

ಕರ್ನಾಟಕ ಪ್ರಾಂತ ರೈತ ಸಂಘದ ದ. ಕ. ಜಿಲ್ಲೆಯ ಬಂಟ್ವಾಳ ತಾಲ್ಲೂಕು ಸಮಿತಿಯ ವಿಸ್ತೃತ ಸಭೆಯು ತಾ॥ 12-2-83ರಂದು ಕಾ. ಎಂ. ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ಬಂಟ್ವಾಳದಲ್ಲಿ ಸೇರಿತು. ಸ್ವಾಗತ ಭಾಷಣ ಮಾಡಿದ ರೈತ ಕಾರ್ಮಿಕ ಮುಂದಾಳು ಕಾ. ವಾಸುಗಟ್ಟಿಯವರು ತಾಲ್ಲೂಕಿನಲ್ಲಿ ಹಳ್ಳಿಯ ಬಡಜನರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಹೇಳುತ್ತಾ ಸಂಘಟನಾ ಸ್ಥಿತಿಯನ್ನು ವಿವರಿಸಿದರು ತಾಲ್ಲೂಕಿನ ರೈತ ಕಾರ್ಮಿಕರ ಮುಂದಾಳುಗಳಾದ ಕಾ. ಪೂವಯ್ಯ ಬಂಗೇರ, ಕಾ. ಬಿ. ನಾರಾಯಣ ಮತ್ತು ಕಾ. ಚಂದ್ರು ಅವರುಗಳು ಸಂಘಟನೆಯನ್ನು ಕಟ್ಟಿ ಬೆಳಸುವುದರ ಬಗ್ಗೆ ಹಲವು ಸೂಚನೆಗಳನ್ನಿತ್ತರು.

ಪುತ್ತೂರು ತಾಲ್ಲೂಕಿನಲ್ಲಿ :

ರೈತ ಸಂಘಟನೆ ಬಲಗೊಳಿಸಲು ನಿರ್ಧಾರ

ಕರ್ನಾಟಕ ಪ್ರಾಂತ ರೈತ ಸಂಘದ ದ. ಕ. ಜಿಲ್ಲಾ ಪುತ್ತೂರು ತಾಲ್ಲೂಕಿನ ತಾಲ್ಲೂಕು ಸಮಿತಿಯ ವಿಸ್ತೃತ ಸಭೆಯು ತಾರೀಖು 11–2–83ರಂದು ಪುತ್ತೂರಿನಲ್ಲಿ ಕಾ. ಎಂ. ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ಸೇರಿತು. ರೈತ ಸಂಘದ ತಾಲ್ಲೂಕು ಸಮಿತಿಯ ಪ್ರಧಾನ ಕಾರ್ಯದರ್ಶಿ ಕಾಮ್ರೇಡ್ ವಿಲ್‌ಫ್ರೆಡ್ ಡಿಸೋಜ ಅವರು ಸ್ವಾಗತ ಮಾಡಿದ ಬಳಿಕ ತಾಲ್ಲೂಕು ಸಮಿತಿಯ ಅಧ್ಯಕ್ಷ ಕಾ. ತಂಬನ್ ಅವರು ತಾಲ್ಲೂಕಿನಲ್ಲಿ ಹಳ್ಳಿಯ ಬಡಜನರು ಎದುರಿಸುತ್ತಿರುವ ತುರ್ತು ಸಮಸ್ಯೆಗಳ ಬಗ್ಗೆ ಮಾತನಾಡಿದರು.

ಪ್ರಾಂತ ರೈತ ಸಂಘದ ರಾಜ್ಯ ಸಮಿತಿ ಸಭೆಯಲ್ಲಿ ಮಾಡಿರುವ ನಿರ್ಣಯಗಳ ಬಗ್ಗೆ ವರದಿ ಮಾಡಿದ ಕಾ. ಎಂ. ಕೆ. ಅವರು ರಾಜ್ಯದಲ್ಲಿ ಬದಲಾಗಿರುವ ರಾಜಕೀಯ ಪರಿಸ್ಥಿತಿಯನ್ನು ವಿಶ್ಲೇಶಿಸಿದರು. ಸಣ್ಣ ರೀತಿಯಲ್ಲಿಯೇ ಯೋಚನೆಮಾಡುವುದನ್ನ ಬಿಟ್ಟು ಇಂದಿನ ಅನುಕೂಲಕರವಾದ ಪರಿಸ್ಥಿತಿಯನ್ನು ಉಪಯೋಗಿಸಿಕೊಂಡು ರೈತ ಸಂಘಟನೆಯನ್ನು ಬೃಹತ್ತಾಗಿ ಬೆಳೆಸಲು ಮುನ್ನುಗ್ಗಲು ಕರೆಯಿತ್ತರು.

ಉಡುಪಿ ತಾಲ್ಲೂಕು :

ರೈತ ಸಂಘಟನೆ ಬಲಗೊಳಿಸಲು ನಿರ್ಧಾರ

ಕರ್ನಾಟಕ ಪ್ರಾಂತ ರೈತ ಸಂಘದ ದ.ಕ. ಜಿಲ್ಲೆಯ ಉಡುಪಿ ತಾಲ್ಲೂಕು ಸಮಿತಿಯ ವಿಸ್ತೃತ ಸಭೆಯು ತಾ॥ 14–2–83ರಂದು ಪಡುಬಿದ್ರೆಯಲ್ಲಿ ತಾಲ್ಲೂಕು ರೈತ ಸಂಘದ ಅಧ್ಯಕ್ಷ ಕಾ. ರಾಮ ಕೆ. ಕುಂದರ ಅಧ್ಯಕ್ಷತೆಯಲ್ಲಿ ಸೇರಿತು. ತಾಲ್ಲೂಕು ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ಲಕ್ಷ್ಮಣ ಅವರು ಸಂಘಟನಾ ಪರಿಸ್ಥಿತಿ ಬಗ್ಗೆ ವರದಿ ಇತ್ತರು. ಸಹ ಕಾರ್ಯದರ್ಶಿ ಕಾ. ಡೇವಿಡ್ ಕರ್ಕಡ ಅವರು ಮಾತನಾಡುತ್ತಾ ಸಂಘಟನೆಯ ನಿಶ್ಯಕ್ತಿಯನ್ನು ಹೋಗಲಾಡಿಸಿ, ಹೊಸ ಶೈಲಿಯಿಂದಲೂ ಹೊಸ ಸ್ಫೂರ್ತಿಯಿಂದಲೂ ಶ್ರಮಿಸಿ ರೈತ ಸಂಘಟನೆಯನ್ನು ಬಲಪಡಿಸಬೇಕೆಂದರು. ಅಧ್ಯಕ್ಷ ರಾಮ. ಕೆ. ಕುಂದರ ಅವರು ರೈತರು ಮತ್ತು ಸಂಘಟನೆ ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಮಾತನಾಡಿದರು.

ರೈತ ಸಂಘ ಪ್ರಾರಂಭ

14–2–83ರಂದು ಶಿರಾ ತಾಲ್ಲೂಕು ಚನ್ನನಕುಂಟೆಯಲ್ಲಿ ರೈತರ ಸಭೆ ನಡೆದು ಈ ಕೆಳಗಿನ ಅಧಿಕಾರ ವರ್ಗವಿರುವರ ರೈತ ಸಂಘ ಸ್ಥಾಪಿಸಲಾಯ್ತು.

ಅಧ್ಯಕ್ಷರಾಗಿ ಶ್ರೀ ತಿಮ್ಮಪ್ಪನವರೂ ಉಪಾಧ್ಯಕ್ಷರಾಗಿ ಶ್ರೀ ಲಕ್ಷ್ಮಣಪ್ಪನವರೂ ಕಾರ್ಯದರ್ಶಿಯಾಗಿ ಹೆಂಜಾರನವರೂ ಕಾರ್ಯ ಸಮಿತಿ ಸದಸ್ಯರಾಗಿ ಕರೆ ಹನುಮಣ್ಣ, ಶಿರಾ ತಿಮ್ಮಪ್ಪ, ಶ್ರೀ ಮುದ್ದಪ್ಪ ಶ್ರೀ ಹನುಮಂತಪ್ಪ ಶ್ರೀ ಈರಣ್ಣನವರನ್ನು ಆರಿಸಲಾಯ್ತು.

ಬೆಂಗಳೂರು :

ರೈತ ಸಂಘದಿಂದ ಮನವಿ

ಕರ್ನಾಟಕ ಪ್ರಾಂತ ರೈತ ಸಂಘದ ಕರೆಯಂತೆ ತಾ॥ 17–2–83 ರಂದು ರಾಜ್ಯದ ರೈತರ ಬೇಡಿಕೆಗಳ ಬಗ್ಗೆ ಮನವಿಪತ್ರ ಅರ್ಪಿಸಲು ಬೆಂಗಳೂರು ದಕ್ಷಿಣ ತಾಲ್ಲೂಕಿನ ರೈತರು ಸಿಲ್ವರ್ ಜ್ಯೂಬಿಲಿ ಪಾರ್ಕಿನಿಂದ ಮೆರವಣಿಗೆ ಹೊರಟು ತಾಲ್ಲೂಕ್ ತಹಸೀಲ್ದಾರರವರಿಗೆ ಮತ್ತು ಜಿಲ್ಲಾಧಿಕಾರಿಗಳ ಗೈರು ಹಾಜರಿಯಲ್ಲಿ ಅವರ ಸಹಾಯಕರಿಗೆ ಬೇಡಿಕೆಗಳ ಮನವೀ ಪತ್ರ ಅರ್ಪಿಸಲಾಯ್ತು. ಸಂಬಂಧ ಪಟ್ಟ ಅಧಿಕಾರಿಗಳು ನಮಗೆ ಸಂಬಂಧಿಸಿದ ಬೇಡಿಕೆಗಳನ್ನು ಈಡೇರಿಸುವ ಭರವಸೆ ನೀಡಿದರು. ಇನ್ನು ಕೆಲವು ಬೇಡಿಕೆಗಳನ್ನು ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು.

ಇದರ ನಾಯಕತ್ವವನ್ನು ಜಿಲ್ಲಾ ಘಟಕದ ಕಾರ್ಯದರ್ಶಿ ಲಕ್ಕಣ್ಣ ಪಿ. ಜಗನ್ನಾಥ, ಶಾಮಣ್ಣ ರೆಡ್ಡಿ ಮತ್ತಿತರರು ವಹಿಸಿದ್ದರು.

ಹರಪನಹಳ್ಳಿ : ರೈತ ಸಂಘದ ಸ್ಥಾಪನೆ

ದಿ. 31–1–83 ರಂದು ಹರಪನಹಳ್ಳಿ ತಾಲ್ಲೂಕ್ ಶಂಕರನಹಳ್ಳಿ ಗ್ರಾಮದಲ್ಲಿ ರೈತ ಸಂಘವನ್ನು ಸ್ಥಾಪಿಸಲಾಯಿತು. 31–1–83 ರಂದು ಗ್ರಾಮದ ಕೃಷಿ ಕೂಲಿಕಾರರೂ ಹಾಗೂ ರೈತರೆಲ್ಲರೂ ಸಭೆ ಸೇರಿದ್ದರು. ಸಭೆಯನ್ನುದ್ದೇಶಿಸಿ ತಾಲ್ಲೂಕ್ ಸಂಚಾಲಕ ಕಾ॥ ಬಿ. ಪರಶುರಾಮ ಮಾತಾಡುತ್ತ ಕೃಷಿ ಕೂಲಿಕಾರರ ಮತ್ತು ಬಡರೈತಾಪಿ ಜನರ ಸಮಸ್ಯೆಗಳಿಗೆ ಗ್ರಾಮದ ಎಲ್ಲಾ ಜನರಿಗೂ ಐಕ್ಯ ಹೋರಾಟಕ್ಕೆ ಕರೆ ಕೊಟ್ಟರು. ಈ ಸಭೆಯ ನಂತರ ಈ ಕೆಳಕಂಡ ಕಾರ್ಯಕಾರಿ ಕಮಿಟಿಯನ್ನು ಚುನಾಯಿಸಲಾಯಿತು.

ಅಧ್ಯಕ್ಷ–ಹೊನ್ನಪ್ಪ, ಉಪಾಧ್ಯಕ್ಷ–ಆಂಜಿನಪ್ಪ, ಕಾರ್ಯದರ್ಶಿ –ಎಸ್. ಎಚ್. ಆಂಜಿನಪ್ಪ, ಖಜಾಂಚಿ – ಪಿ. ಸಣದುರುಗಪ್ಪ.

ದಿನಾಂಕ 25–2–83 ರಂದು ಹರಪನಹಳ್ಳಿ ತಾಲೂಕ್ ಮುತ್ತಿಗಿ ಗ್ರಾಮದಲ್ಲಿ ಪ್ರಾಂತ ರೈತ ಸಂಘವನ್ನು ಸ್ಥಾಪಿಸಲಾಯಿತು. 25-2-83 ರಂದು ಗ್ರಾಮದಲ್ಲಿನ ಸುಮಾರು 300 ಜನರು ಸಭೆಗೆ ಹಾಜರಿ ಇದ್ದರು. ಈ ಸಭೆಯನ್ನುದ್ದೇಶಿಸಿ ತಾಲ್ಲೂಕ್ ಸಂಚಾಲಕ ಕಾ. ಬಿ. ಪರಸುರಾಮರವರು ಮಾತನಾಡಿದರು.

ತುಮಕೂರು :

ರೈತ ಸಂಘದಿಂದ ಮನವಿ

ತಾರೀಖು 17 – 2 – 1983ನೇ ಗುರುವಾರದಂದು ಕರ್ನಾಟಕ ಪ್ರಾಂತ ರೈತ ಸಂಘದ ತೀರ್ಮಾನ ಮತ್ತು ಆದೇಶದಂತೆ ತುಮಕೂರು ಜಿಲ್ಲಾ ರೈತ ಸಂಘದ ನಿಯೋಗವೊಂದು ಮನವಿ ಪತ್ರಗಳನ್ನು ರಾಜ್ಯದ ಮುಖ್ಯ ಮಂತ್ರಿಗಳಿಗೂ, ಜಿಲ್ಲಾಧಿಕಾರಿಗಳಿಗೂ ಮತ್ತು ತಹಸಿಲ್ದಾರ್‌ರವರಿಗೂ ಸಲ್ಲಿಸಲಾಯ್ತು.

ದೊಡ್ಡ ಬೆಳವಂಗಲ :

ರೈತ ಸಂಘದ ಸಮ್ಮೇಳನ

ತಾ॥ 20–2–83ರಂದು ದೊಡ್ಡಬಳ್ಳಾಪುರ ತಾಲ್ಲೂಕು ದೊಡ್ಡಬೆಳವಂಗಲ ಹೋಬಳಿ ರೈತ ಸಂಘದ ಸಮ್ಮೇಳನ ನಡೆಯಿತು, ಕಾ। ಮುನಿರಂಗಯ್ಯ ಕಾ॥ ಡಿ. ಎಂ. ತಿಮ್ಮರಾಯಪ್ಪ, ಕಾ॥ ಡಿ. ಎಂ. ಮುನಿಯಪ್ಪನವರ ಅಧ್ಯಕ್ಷ ಮಂಡಲಿಯಲ್ಲಿ ಸಭೆ ಆರಂಭವಾಯಿತು. ಕಾ॥ ಸಿ. ರಾಮಭದ್ರಯ್ಯನವರು ಸ್ವಾಗತಿಸಿದ ನಂತರ ಪ್ರಾಂತ ರೈತ ಸಂಘದ ಅಧ್ಯಕ್ಷ ಮತ್ತು ಶಾಸಕ ಕಾ॥ ಪಿ. ರಾಮಚಂದ್ರರಾವ್ ಉದ್ಘಾಟನೆ ಮಾಡಿದರು. ಶಾಸಕ ಮಂತ್ರಿಗಳ ವೈಭವ ಜೀವನವನ್ನ ಸರಳಗೊಳಿಸಬೇಕು. ಪ್ರತಿ ಗ್ರಾಮಕ್ಕೂ ಒಂದು ರೈತ ಸಂಘ ಇರಬೇಕು. ಎಂದು ತಿಳಿಸಿದರು.

ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಎಂ. ಎಸ್. ಹಳಕಟ್ಟಿ ಮತ್ತು ರಾಯಚೂರಿನ ಕಾ. ಚಂದ್ರಶೇಖರ ಬಾಳಿಯವರು ಸಹ ಮಾತನಾಡಿದರು. ಕಾ. ಸಿ. ರಾಮಭದ್ರಯ್ಯನವರು, ಕಾ. ಮುಗುವಾಳಪ್ಪನವರು ಮತ್ತು ಟಿ. ಎನ್. ಬಾಲಾಜಿಯವರು ರೈತರ ಬೆಳೆಗಳಿಗೆ ನ್ಯಾಯ ಬೆಲೆ, ಸಾಲ ರದ್ದತಿ, ನೀರು ತೆರಿಗೆ ವಜಾ, ದೊಡ್ಡಬೆಳವಂಗಲ ಹೋಬಳಿ ಒಳ ಪ್ರದೇಶಕ್ಕೆ ರಸ್ತೆಗಳನ್ನು ಉತ್ತಮಪಡಿಸುವ ಮತ್ತು ಬಸ್ಸುಗಳನ್ನು ಹಾಕಬೇಕೆನ್ನುವ ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಬೇಕೆನ್ನುವ ಬಂಜರು ಭೂಮಿ ವಿತರಣೆ ಮತ್ತು ಉಳಮೆ ಚೀಟಿ ಮತ್ತು ಪಟ್ಟಾಗಳನ್ನು ಕೊಡಬೇಕೆನ್ನುವ, ನೀರಿಲ್ಲದ ಊರುಗಳಿಗೆ ಬೋರ್‌ವೆಲ್‌ಗಳನ್ನು ಹಾಕಬೇಕೆನ್ನುವ ಹಗಲಿನಲ್ಲಿ ಪಂಪು ಸೆಟ್ಟುಗಳಿಗೆ ವಿದ್ಯುತ್ ಪೂರೈಸುವ ಮತ್ತು ವಿದ್ಯುತ್ ಕಡಿತವನ್ನು ದಿನಕ್ಕೆ 6 ಗಂಟೆ ಇಂದ 3 ಗಂಟೆಗೆ ಇಳಿಸಬೇಕನ್ನುವ ನಿರ್ಣಯಗಳನ್ನು ಕೈಗೊಳ್ಳಲಾಯಿತು. ಗ್ರಾಮದಲ್ಲಿ ರೈತರ ಮೆರವಣಿಗೆ ನಂತರ ಬಹಿರಂಗ ಸಭೆ ನಡೆಯಿತು ಕೋಡಿಹಳ್ಳಿ ರೈತ ಸಂಘದವರು “ಬಂದ್ರುಪ್ಪೋ ಬಂದ್ರು”, ಮತ್ತು ದೊಡ್ಡಬಳ್ಳಾಪುರದ ಕಾರ್ಮಿಕರು “ಒಂದು ಊರಿನ ಕಥೆ” ಎಂಬ ನಾಟಕಗಳನ್ನು ಆಡಿದರು.

ತೀರ್ಥಹಳ್ಳಿಯಲ್ಲಿ ರೈತರ ಮೆರವಣಿಗೆ

ದಿನಾಂಕ 3–2–83 ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿಯಲ್ಲಿ ಹಾಗೂ ಬೃಹತ್ ಬಹಿರಂಗಸಭೆ ನಡೆದರು.

ಮೆರವಣಿಗೆಗೆ ಹಳ್ಳಿ ಹಳ್ಳಿಗಳಿಂದ ಜನರು ಬಂದಿದ್ದರು. ಸುಮಾರು ಒಂದೂವರೆ ಸಾವಿರಕ್ಕೂ ಮಿಕ್ಕಿದ್ದ ಈ ಮೆರವಣಿಗೆಯಲ್ಲಿ ಮಹಿಳೆಯರೇ ಹೆಚ್ಚಾಗಿದ್ದು, ಮುಸ್ಲಿಂ ಮಹಿಳೆಯರೂ ಭಾಗವಹಿಸಿದ್ದು ಮೆರವಣಿಗೆ ವೈಶಿಷ್ಟ್ಯವಾಗಿತ್ತು. ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಘೋಷಣೆ ಕೂಗುತ್ತಾ ಬಹಿರಂಗ ಸಭೆ ನಡೆಯುವ ಸ್ಥಳಕ್ಕೆ ಬರುವ ಹೊತ್ತಿಗೆ 5 ಸಾವಿರಕ್ಕೂ ಮಿಕ್ಕಿ ರೈತಬಾಂಧವರು ಸಭೆಯಲ್ಲಿ ಜಮಾಯಿಸಿದ್ದರು.

ಕಲ್ಲು ಕಡಿಯುವವರ ಮತ್ತು ಕಟ್ಟಡಕೆಲಸಗಾರರ ಸಮಾವೇಶ

ಕೆಂಪು ಕಲ್ಲು ಮತ್ತು ಕಟ್ಟಡ ಕೆಲಸಗಾರರ ಸಮಾವೇಶವು ತಾರೀಖು 20–2–83ರಂದು ಬಂಟ್ವಾಳ ಮತ್ತು ಮಂಗಳೂರು ತಾಲ್ಲೂಕು ಸ್ಟೋನ್ ಕ್ವಾರಿ ಮತ್ತು ಯಲ್ಯಾರ್ಡ್ ವರ್ಕರ್ಸ್ ಯೂನಿಯನ್ನಿನ ಆಶ್ರಯದಲ್ಲಿ ಆಸೆಗೋಳಿಯಲ್ಲಿ ಯೂನಿಯನ್ನಿನ ಅಧ್ಯಕ್ಷರಾದ ಕಾ. ವೆಂಕಪ್ಪಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರುಗಿತು. ಪ್ರಾರಂಭದಲ್ಲಿ ಎಂ.ಬಿ. ಅಬ್ಬಾಸ್ ಸ್ವಾಗತಿಸಿದರು. ಯೂನಿಯನಿನ ಕಾರ್ಯದರ್ಶಿ ಕಾ. ಯು.ಬಿ. ಲೋಕಯ್ಯನವರು ಸಂಘಟನೆಯ ಬಗ್ಗೆ ಹಾಗೂ ಕಲ್ಲು ಕಡಿಯುವವರ ಮುಂದೆ ಇರುವ ಸಮಸ್ಯೆಗಳ ಕುರಿತು ವಿವರಿಸಿದರು.

ಸಭೆಯಲ್ಲಿ ಉಪಸ್ಥಿತರಿದ್ದ ಜಿಲ್ಲಾ ಸಿ. ಐ. ಟಿ. ಯು ಕಾರ್ಯದರ್ಶಿ ಕೆ. ಮೂಸಬ್ಬನವರು ಕಲ್ಲು ಕಡಿಯುವ ಮಾಲಿಕರ ಅನ್ಯಾಯ ಹಾಗೂ ಮಜೂರರ ಕಷ್ಟಗಳನ್ನು ವಿವರಿಸಿ ಸಂಘಟನೆಯಿಂದಲೇ ಇದನ್ನು ಪರಿಹರಿಸಲು ಸಾಧ್ಯ ಎಂದರು.

ದ. ಕ. ಜಿಲ್ಲಾ ‘ಆಟೋ ರಿಕ್ಷಾ ಚಾಲಕರ ಸಂಘ’ದ ವಾರ್ಷಿಕ ಮಹಾಸಭೆ

ದ. ಕ. ‘ಆಟೋ ರಿಕ್ಷಾ - ಚಾಲಕರ ವಾರ್ಷಿಕ ಮಹಾಸಭೆಯು ತಾರೀಖು 25–2–83ರಂದು ಶ್ರೀ ಪಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಕಾರ್ಯದರ್ಶಿ ವರದಿ ಮತ್ತು ಲೆಕ್ಕಪತ್ರವನ್ನು ಸಭೆಯ ಮುಂದಿಟ್ಟರು.

ಮಂಗಳೂರಿಗೆ ಪ್ರತ್ಯೇಕ ಮೀಟರ್ ದರವನ್ನು ನಿಗದಿ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸಲು ನಿರ್ಣಯಿಸಲಾಯಿತು.

ನಗರದಲ್ಲಿ ನೊಎಂಟ್ರಿ ಮತ್ತು ನೊ ಪಾರ್ಕಿಂಗ್ ಬೋರ್ಡುಗಳನ್ನು ಸ್ಪಷ್ಟಪಡಿಸಬೇಕೆಂದು ಒತ್ತಾಯಿಸಿ ಪೋಲೀಸು ಅಧಿಕಾರಿ ಕಛೇರಿ ಮುಂದೆ ಸತ್ಯಾಗ್ರಹ ನಡೆಸಲು ನಿರ್ಣಯಿಸಲಾಯಿತು.

ವಿಕ್ರಮ್ ಇಟ್ಟಿಗೆ ಕಾರ್ಖಾನೆಯ ಕಾರ್ಮಿಕ ಸಮಿತಿ ರಚನೆ

ತಾ॥ 27–2–83 ರಂದು ಕುಂದಾಪುರ ತಲ್ಲೂಕಿನ ತಲ್ಲೂರ್ ಎಂಬಲ್ಲಿ ವಿಕ್ರಮ್ ಇಟ್ಟಿಗೆ ಕಾರ್ಖಾನೆಯ ಕಾರ್ಮಿಕರ ವಿಸ್ತೃತ ಸಭೆಯು ದ.ಕ. ಹಂಚಿನ ಮಜ್ದೂರರ ಸಂಘದ ಕುಂದಾಪುರ ಡಿವಿಜನ್ ಸಮಿತಿಯ ಕಾರ್ಯದರ್ಶಿಯವರಾದ ಶ್ರೀಯುತ ಸಿ. ನಾರಾಯಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಭೆಯಲ್ಲಿ ದಕ್ಷಿಣ ಕನ್ನಡ ಹಂಚಿನ ಮಜ್ದೂರರ ಸಂಘ (ಸಿ.ಐ.ಟಿ.ಯು.)ದ ಸದಸ್ಯರಾಗಿ ಸೇರಲು ತೀರ್ಮಾನ ತೆಗೆದುಕೊಳ್ಳಲಾಯಿತು. 1983ರ ಸಾಲಿನ ಸಂಘದ ಸದಸ್ಯತ ಸಂಗ್ರಹ ಮಾಡಲು ನಿರ್ಧರಿಸಿ, ಕಾರ್ಖಾನೆಯಲ್ಲಿ ಶ್ರಮಭಾರ ಹೆಚ್ಚಿಸುವುದರ ವಿರುದ್ಧ ಹೋರಾಡಲು ತೀರ್ಮಾನ ತೆಗೆದುಕೊಳ್ಳಲಾಯಿತು.

ಮಾರ್ಕ್ಸ್ ಮರಣ ಶತಾಬ್ಧಿ ಲೇಖನ ಮಾಲೆ

ಲೇಖನ-4

"ಮಾರ್ಕ್ಸ್ ಇತರ ಎಲ್ಲಕ್ಕಿಂತ ಮಿಗಿಲಾಗಿ ಓರ್ವ ಕ್ರಾಂತಿಕಾರಿ. ಬಂಡವಾಳಶಾಹಿ ಸಮಾಜವನ್ನೂ ಅದು ತನ್ನೊಂದಿಗೆ ಅಸ್ತಿತ್ವಕ್ಕೆ ತಂದಿದ್ದ ಪ್ರಭುತ್ವದ ಸಂಸ್ಥೆಗಳನ್ನೂ ಕಿತ್ತೆಸೆಯುವುದು ಮತ್ತು ಆಧುನಿಕ ಶ್ರಮಜೀವಿ ವರ್ಗದ ವಿಮೋಚನೆಗಾಗಿ ಒಂದಲ್ಲೊಂದು ರೀತಿಯಲ್ಲಿ ದುಡಿಯುವುದೇ ಅವರ ಬದುಕಿನ ಸ್ಪಷ್ಟ ಉದ್ದೇಶವಾಗಿತ್ತು. ಆಧುನಿಕ ಕಾರ್ಮಿಕ ವರ್ಗವು ಹೊಂದಿರುವ ಸ್ಥಾನಮಾನವೇನು, ಅದರ ಅವಶ್ಯಕತೆಗಳೇನು ಮತ್ತು ವಿಮೋಚನೆ ಹೇಗಾಗುತ್ತದೆನ್ನುವ ಕುರಿತು ಮೊತ್ತಮೊದಲಿಗೆ ಶ್ರಮಜೀವಿ ವರ್ಗಕ್ಕೆ ಅರಿವುಂಟಾಗುವಂತೆ ಮಾಡಿದವರು ಕಾರ್ಲ್ ಮಾರ್ಕ್ಸ್".

-ಫ್ರೆಡರಿಕ್ ಎಂಗೆಲ್ಸ್

(ಕಾರ್ಲ್ ಮಾರ್ಕ್ಸ್ ಅವರ ಸಮಾಧಿಯ ಬಳಿ ಮಾಡಿದ ಭಾಷಣದಿಂದ)

ಕಾರ್ಲ್ ಮಾರ್ಕ್ಸ್ ಮತ್ತು

ಜಗತ್ತಿನ ದುಡಿಯುವ ವರ್ಗದ ಚಳುವಳಿಯ ಇತಿಹಾಸವು ಕಾರ್ಲ್ ಮಾರ್ಕ್ಸ್ ಅವರ ಜೀವನ ಮತ್ತು ವಿಚಾರಗಳೊಂದಿಗೆ ಅವಿಚ್ಛಿನ್ನವಾದ ಸಂಬಂಧ ಹೊಂದಿದೆ.

ಇಂಗ್ಲೆಂಡಿನಲ್ಲಿ ಸಮಾನತಾವಾದಿಗಳು (Levellers) ಹಾಗೂ ಚಾರ್ಟಿಸ್ಟ್‌ಗಳೇ ಮುಂತಾದ ಆದರ್ಶವಾದಿಗಳನ್ನು(utopeans)ಸಾಕಷ್ಟು ಕಂಡಿದ್ದ ಅಲ್ಲಿನಕಾರ್ಮಿಕವರ್ಗ,ತನ್ನ ಮೇಲೆ ಬಂಡವಾಳಶಾಹಿ ವರ್ಗವು ಹೇರಿದ್ದ ಅಲ್ಲಿನ ಅಮಾನವೀಯ ಸ್ಥಿತಿಗತಿಗಳ ವಿರುದ್ಧ ಸಿಡಿದೆದ್ದ ಕಾಲದಲ್ಲಿ ಕಾರ್ಲ್ ಮಾರ್ಕ್ಸ್ ಅತಿರಿಕ್ತ ಮೌಲ್ಯದ ಕ್ರಾಂತಿಕಾರಿ ಸಿದ್ಧಾಂತವನ್ನೂ, ಸಮಾಜ ವಿಕಸನದ ಚಲನೆಯ ನಿಯಮಗಳನ್ನೂ ಸಂಶೋಧಿಸಿ ಅದನ್ನು ಇಂಗ್ಲೆಂಡಿನ ಕಾರ್ಮಿಕ ವರ್ಗಕ್ಕೆ ತಿಳಿಯಪಡಿಸಿದರು. ಈ ಕಾರ್ಮಿಕರು ತಮ್ಮ ವರ್ಗ ಸಂಘಟನೆಯನ್ನು ಕಟ್ಟಿಕೊಳ್ಳುವಂತೆ ವಾಸ್ತವವಾಗಿ ಅವರಿಗೆ ಮುಂದಾಳತ್ವ ನೀಡಿದವರು ಕಾರ್ಲ್ ಮಾರ್ಕ್ಸ್.

ಇಂಗ್ಲೆಂಡಿನ ಕಾರ್ಮಿಕ ಈ ವೇಳೆಗಾಗಲೇ ದುಡಿಮೆಯ ಅವಧಿಯನ್ನು ಹತ್ತು ಗಂಟೆಗೆ ಸೀಮಿತಗೊಳಿಸುವ ಕಾನೂನನ್ನು ಜಾರಿಗೆ ಬರುವಂತೆ ಮಾಡುವುದರಲ್ಲಿ ಯಶಸ್ವಿಯಾಗಿತ್ತು. ಮಾರ್ಕ್ಸ್ ಅವರ ಮಾತಿನಲ್ಲೇ ಹೇಳುವುದಾದರೆ ಇದು ಕಾರ್ಮಿಕರನ್ನೂ ಅವರ ಕುಟುಂಬಗಳನ್ನೂ ಸಾವು ನೋವಿನ ಬಾಯಿಂದ ಉಳಿಸಿದ ಕಾನೂನು. ಯಂತ್ರಗಳ ಉಪಯೋಗವನ್ನು ಬಳಕೆಗೆ ತಂದಿದ್ದ ಬಂಡವಾಳಗಾರರು ಕಾರ್ಮಿಕರ ದುಡಿಮೆಯ ಅವಧಿಯನ್ನು ಒಂದೇಸಮನೆ ವಿಸ್ತರಿಸಲಾರಂಭಿಸಿದ್ದರು. ಕಾರ್ಮಿಕರು ಯಂತ್ರಗಳ ಅಂಗವೇ ಆಗಿಬಿಟ್ಟಿದ್ದರು. ಮೊದಮೊದಲು ಯಂತ್ರಗಳನ್ನು ಕುಟ್ಟಿ ನಾಶ ಮಾಡುತ್ತಿದ್ದ ಕಾರ್ಮಿಕರು ಕ್ರಮೇಣ ಒಂದಾಗಿ ಬೇಡಿಕೆಗಳ ಪಟ್ಟಿಯೊಂದನ್ನು ಸಿದ್ಧಪಡಿಸಿಕೊಂಡರಲ್ಲದೆ ಅಂತಿಮವಾಗಿ ಬಂಡವಾಳಶಾಹಿ ಪ್ರಭುತ್ವವು ಕಾನೂನನ್ನು ಅಂಗೀಕರಿಸುವಂತೆ ಒತ್ತಾಯಿಸುವುದರಲ್ಲಿ ಸಫಲರಾದರು.

ಇದು ನಡೆದದ್ದು ಕೈಗಾರಿಕಾ ಕ್ರಾಂತಿಯ ಬಳಿಕ – ಇಂಗ್ಲೆಂಡು ಬೃಹತ್ ಪ್ರಮಾಣದ ಕೈಗಾರಿಕೆಗಳನ್ನು ಸ್ಥಾಪಿಸಲು ಆರಂಭಿಸಿದ ಮೇಲೆ. ಆದರೆ ಕೈಗಾರಿಕಾ ಕ್ರಾಂತಿ ಸಂಪೂರ್ಣವಾದ ಮೇಲೆ ಅಂದರೆ ಹತ್ತೊಂಭತ್ತನೇ ಶತಮಾನದ ಮೂರನೇ ದಶಕದಲ್ಲಿ ಇಂಗ್ಲೆಂಡಿನ ಕಾರ್ಮಿಕ ವರ್ಗವು ಆಳುವ ವರ್ಗಗಳ ಕೈಯಿಂದ ಹತ್ತುಗಂಟೆಯ ದುಡಿಮೆಯಂತಹ ಕೆಲವು ಸವಲತ್ತುಗಳನ್ನು ಗಳಿಸಿಕೊಳ್ಳುವಲ್ಲಿ ಸಫಲವಾಗಿದ್ದರೆ ಫ್ರಾನ್ಸ್ ಮತ್ತಿತರ ಕಡೆ ಕಾರ್ಮಿಕ ವರ್ಗ ಅಂತಹ ಸವಲತ್ತುಗಳನ್ನು ಗೆದ್ದುಕೊಳ್ಳಲು ಸಮರ್ಥವಾಗಲಿಲ್ಲ.

ಈ ವೇಳೆಗೆ ಯುರೋಪ್ ಖಂಡದಲ್ಲಿ ಕೈಗಾರಿಕೆಗಳು ಸಂಪೂರ್ಣವಾಗಿ ಅಭಿವೃದ್ಧಿ ಹೊಂದಿರಲಿಲ್ಲ. ಅಲ್ಲಿನ ಬಡಜನರ ಮೇಲೆ ಇನ್ನೂ ಆದರ್ಶವಾದಿಗಳ (utopeans) ಪ್ರಭಾವ ಸಾಕಷ್ಟು ಉಳಿದಿತ್ತು. ಬಾಬ್ಯೂಫ್ ನಡೆಸಿದಂತಹ ಕ್ಷಿಪ್ರ ಕ್ರಾಂತಿಗಳ ಯಶಸ್ಸಿನ ಮೇಲೆ ಬಡಜನತೆಗೆ ಇನ್ನೂ ವಿಶ್ವಾಸವಿತ್ತು. ಉತ್ಪಾದನಾ ಸಂಬಂಧಗಳು ಬೇರೆ ಬೇರೆ ಹಂತದಲ್ಲಿ ವಿಕಸನವಾದಂತೆ ಅದಕ್ಕೆ ಅನುಗುಣವಾಗಿ ದುಡಿಯುವ ವರ್ಗದ ಪ್ರಜ್ಞೆ, ವರ್ತನೆಗಳು ಮತ್ತು ವಾಸ್ತವಿಕತೆಗಳ ತಿಳುವಳಿಕೆಯೂ ಬೇರೆ ಬೇರೆ ಪ್ರಮಾಣದಲ್ಲಿ ಬೆಳೆದುದನ್ನು ನಾವಿಲ್ಲಿ ಕಾಣಬಹುದು. ಮಾರ್ಕ್ಸ್ ಅವರ ಕಾಲದಲ್ಲಿ ಮತ್ತು ಅವರ ಕಾಲಾನಂತರದಲ್ಲೂ ಜಗತ್ತಿನ ದುಡಿಯುವ ವರ್ಗ ತಳೆದಂತಹ ಎಡ ಮತ್ತು ಬಲ ಅತಿರೇಕವಾದಿ ನಿಲುಮೆಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಬೇಕಾದರೆ ನಾವು ಈ ವರ್ಗದ ಭೌತಿಕ ತಳಹದಿಯನ್ನೂ ತಿಳಿದಿರಬೇಕು.

ಮಾರ್ಕ್ಸ್ ಮತ್ತು ಎಂಗೆಲ್ಸ್ ಇಂಗ್ಲೆಂಡಿನಲ್ಲಿ ತಮ್ಮ ಚಟುವಟಿಕೆಗಳನ್ನು ಪ್ರಾರಂಭಿಸುವ ಮೊದಲೇ ಜರ್ಮನಿಯಿಂದ ದೇಶಭ್ರಷ್ಟರಾಗಿ ಬಂದಿದ್ದ ಕೆಲವರು ಸ್ಥಾಪಿಸಿದ್ದ 'ಲೀಗ್ ಆಫ್ ದಿ ಜಸ್ಟ್' ಎಂಬ ಗುಪ್ತ ಸಂಘಟನೆಯೊಂದು ಅಲ್ಲಿ ಕೆಲಸ ಮಾಡಿಕೊಂಡಿತ್ತು. ಎಲ್ಲಾ ವರ್ಗಗಳನ್ನೂ ಸಮಾನಗೊಳಿಸುವ ಆದರ್ಶವಾದಿ ಕಲ್ಪನೆ ಈ ಲೀಗ್‌ನ ಗುರಿಯಾಗಿತ್ತು.

ಮಾರ್ಕ್ಸ್ ಸಂಶೋಧಿಸಿ ಪ್ರಚುರಪಡಿಸಿದ ಸಾಮಾಜಿಕ ವಿಕಸನದ ಸೂತ್ರಗಳು ಇಂಗ್ಲೆಂಡಿನ ಕಾರ್ಮಿಕ ವರ್ಗವನ್ನು ಆಕರ್ಷಿಸಿದವು. ಎಂಗೆಲ್ಸ್ ಕೂಡಾ ತಮ್ಮ 'ಇಂಗ್ಲೆಂಡಿನ ಕಾರ್ಮಿಕ ವರ್ಗದ ಸ್ಥಿತಿ' (conditions of the working class in England) ಯನ್ನು ಈ ವೇಳೆಯಲ್ಲೇ ಪ್ರಕಟಿಸಿದ್ದರು. ಕಾರ್ಲ್ ಮಾರ್ಕ್ಸ್ ತಮ್ಮ 'ವೇತನಕ್ರಮ ಮತ್ತು ಬಂಡವಾಳ' ಹಾಗೂ 'ಸಿದ್ಧಾಂತದ ಬಡತನ' (Poverty of Philosophy) ಎಂಬ ಹೊತ್ತಿಗೆಗಳನ್ನು ಪ್ರಕಟಿಸಿದ್ದರು.

'ಲೀಗ್ ಆಫ್ ದಿ ಜಸ್ಟ್' 1847 ರಲ್ಲಿ ತನ್ನ ಹೆಸರನ್ನು 'ಕಮ್ಯುನಿಸ್ಟ್ ಲೀಗ್' ಎಂಬುದಾಗಿ ಬದಲಾಯಿಸಿಕೊಂಡಿತು. ಕಮ್ಯುನಿಸ್ಟ್ ಲೀಗ್‌ಗಾಗಿ ಮಾರ್ಕ್ಸ್ ಮತ್ತು ಎಂಗೆಲ್ಸ್ ಸಿದ್ಧಪಡಿಸಿದ ಕಾರ್ಯಕ್ರಮವೇ 'ಕಮ್ಯುನಿಸ್ಟ್ ಪಕ್ಷದ ಪ್ರಣಾಳಿಕೆ' (Manifesto of the Communist Party).

'ಕಮ್ಯುನಿಸ್ಟ್ ಮೆನಿಫೆಸ್ಟೋ' ಸಾಮಾಜಿಕ ವಿಕಸನದ ನಿಯಮಗಳನ್ನು ಸಂಕ್ಷಿಪ್ತವಾಗಿ ವಿವರಿಸಿದೆ. ಇತಿಹಾಸದಲ್ಲಿ ಯಾವತ್ತೂ ವರ್ಗಗಳಿದ್ದವೆಂಬುದನ್ನು ಕಮ್ಯುನಿಸ್ಟ್ ಪ್ರಣಾಳಿಕೆ ತೋರಿಸಿಕೊಟ್ಟಿದೆ. ಆಧುನಿಕ ಕಾಲದಲ್ಲಿ ಈ ವರ್ಗಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಪರಸ್ಪರ ವಿರೋಧಿ ವರ್ಗಗಳಾಗಿರುವ 'ಸ್ವಾಮ್ಯವರ್ಗ' (Bourgeoisie) ಮತ್ತು ಕಾರ್ಮಿಕ ವರ್ಗ(Proletariat) ಇವೆರಡೂ ಬಂಡವಾಳಶಾಹಿ ಸಮಾಜದ ಉತ್ಪನ್ನಗಳು. ಪಾಳೆಯಗಾರಿ ಒಡೆಯರುಗಳಿಗೆ ವಿರುದ್ಧವಾಗಿ ಬಂಡವಾಳಶಾಹಿ ಒಂದು ವರ್ಗವಾಗಿ ಬೆಳೆದು ಬಂದಿತ್ತು. ತನ್ನ ಪ್ರಾಬಲ್ಯವನ್ನು ಹೀಗೆ ಸ್ಥಾಪಿಸಿಕೊಂಡ ಮೇಲೆ ಬಂಡವಾಳಶಾಹಿಯು ಉತ್ಪಾದಕ ಶಕ್ತಿಗಳನ್ನು ಈ ಹಿಂದೆ ಎಂದೂ ಕಂಡಿರಲಾರದಷ್ಟು ಅಭಿವೃದ್ಧಿಪಡಿಸಿಕೊಂಡಿತು ಇದೀಗ ಈ ಉತ್ಪಾದನಾ ಸಂಬಂಧಗಳ ಚೌಕಟ್ಟಿನೊಳಗೆ ಉತ್ಪಾದಕ ಶಕ್ತಿಗಳು ಇನ್ನು ಬೆಳೆಯುವುದು ಅಸಾಧ್ಯ. ಬಂಡವಾಳಶಾಹಿಯ ಬೆಳವಣಿಗೆಯೊಂದಿಗೇ ಸ್ವಾಮ್ಯವರ್ಗವು ತನ್ನ ವಿನಾಶ ಕರ್ತರನ್ನು ಹುಟ್ಟಿಸಿ ಬೆಳೆಯಿಸಿದೆ. ಅದೇ ಕಾರ್ಮಿಕವರ್ಗ. ಕಾರ್ಮಿಕವರ್ಗವು ಮೊದಲಿಗೆ ಒಂದು ವರ್ಗವಾಗಿ ಸಂಘಟನೆಗೊಳ್ಳುತ್ತದೆ; ಬಳಿಕ ರಾಜಕೀಯ ಪಕ್ಷಗಳಾಗಿಯೂ ಸಂಘಟಿತವಾಗುತ್ತದೆ ಕಮ್ಯುನಿಸ್ಟರು ಇಡೀ ಕಾರ್ಮಿಕವರ್ಗದ ಹಿತಾಸಕ್ತಿಯನ್ನು ಪ್ರತಿನಿಧಿಸುವವರು ಮತ್ತು ಸಾಮಾಜಿಕ ಬದಲಾವಣೆಯನ್ನು ತರುವಲ್ಲಿ ದೃಢ ನಿಶ್ಚಯದಿಂದ ಹೋರಾಡುವವರೂ ಅವರೇ. ಕಮ್ಯುನಿಸ್ಟ್ ಮೆನಿಫೆಸ್ಟೋ ಈ ಎಲ್ಲಾ ಅಂಶಗಳನ್ನೊಳಗೊಂಡ ಒಂದು ಹೇಳಿಕೆ ಮಾತ್ರವೇ ಅಲ್ಲ; ಅದು ಹೋರಾಟದ ಸಿದ್ಧಾಂತ ಮತ್ತು ರಾಜಕೀಯ ನಿರ್ದೇಶನವನ್ನೂ ಒಳಗೊಂಡಿದೆ.

ಕಮ್ಯುನಿಸ್ಟ್ ಲೀಗ್ 1848 ರ ಕ್ರಾಂತಿಯ ನಂತರವೂ ಅಂದರೆ 1854 ರವರೆಗೂ ಉಳಿದುಕೊಂಡಿತ್ತು.

1864ರಲ್ಲಿ ಅಂತರರಾಷ್ಟ್ರೀಯ ದುಡಿಯುವ ಜನರ ಸಂಘಟನೆಯು (International Working Men's Association) ಲಂಡನಿನಲ್ಲಿ ಸ್ಥಾಪಿಸಲ್ಪಟ್ಟಿತು. ಅದೇ ವರ್ಷ ಫ್ರೆಂಚ್ ಕಾರ್ಮಿಕರ ನಿಯೋಗವೊಂದು ಲಂಡನ್ ಟ್ರೇಡ್ ಕೌನ್ಸಿಲನ್ನು ಭೇಟಿಮಾಡಿ ಪೋಲೀಶ್ ಜನರ ಬಂಡಾಯವನ್ನು ಬೆಂಬಲಿಸಲೂ, ಯೂರೋಪಿನ ಇತರ ದೇಶಗಳಿಂದ ಇಂಗ್ಲೆಂಡಿಗೆ ಕಾರ್ಮಿಕರು ವಲಸೆ ಬರುತ್ತಿರುವ ಹಿನ್ನೆಲೆಯಲ್ಲಿ ಬ್ರಿಟಿಷ್ ಉದ್ಯೋಗಪತಿಗಳು ಕಾರ್ಮಿಕರ ವೇತನವನ್ನು ಒಂದೇ ಸಮನೆ ಇಳಿಸುತ್ತಿರುವುದನ್ನು ವಿರೋಧಿಸಲೂ ಜಂಟೀ ಪ್ರದರ್ಶನವೊಂದನ್ನು ಏರ್ಪಡಿಸಬೇಕೆಂದು ಇಂಗ್ಲಿಷ್ ಕಾರ್ಮಿಕರಿಗೆ ಸೂಚನೆಯಿತ್ತಿತು.

ಇಂಗ್ಲಿಷ್ ಕಾರ್ಮಿಕರಿಗೆ ತಮ್ಮ ಜೀವನಮಟ್ಟವನ್ನು ಕಾಯ್ದುಕೊಳ್ಳುವುದು ತೀರಾ ಅಗತ್ಯವಾಗಿತ್ತು. ಅಂತೆಯೇ ಯುರೋಪಿನಲ್ಲಿ ಬೆಳೆದು ಬರುತಿದ್ದ ಕಾರ್ಮಿಕ ವರ್ಗಕ್ಕೂ ಇಂತಹ ಅವಶ್ಯಕತೆಗಳಿದ್ದವು. ಇವೆರಡೂ ಕಾರಣಗಳಿಂದಾಗಿ ಪ್ರಥಮ ಅಂತರಾಷ್ಟ್ರೀಯ ಜನ್ಮ ತಳೆಯಿತು. ಪ್ರಥಮ ಅಂತರಾಷ್ಟ್ರೀಯದಲ್ಲಿನ (First International) ಜರ್ಮನ್ ವಿಭಾಗದ ಪ್ರತಿನಿಧಿಯಾಗಿ ಕಾರ್ಲ್‌ಮಾರ್ಕ್ಸ್ ಅದರ ಕೇಂದ್ರ ಸಮಿತಿಯ ಸದಸ್ಯರಲ್ಲೊಬ್ಬರಾಗಿ ಆಯ್ಕೆಯಾದರು.

ಪ್ರಥಮ ಅಂತರಾಷ್ಟ್ರೀಯವು ರೂಪು ತಳೆದ ಆರಂಭದಲ್ಲೇ ಕಾರ್ಲ್‌ಮಾರ್ಕ್ಸ್ ಪ್ರೌಧಾನ್‌ನಂತಹ ಫ್ರೆಂಚ್ ಆದರ್ಶವಾದಿಯನ್ನು ಎದುರಿಸಬೇಕಾಯಿತು. ಪ್ರೌಧಾನ್ ಪ್ರಭಾವ ಪ್ರಥಮ ಅಂತಾರಾಷ್ಟ್ರೀಯದ ಮೇಲೆ ಗಣನೀಯವಾಗಿತ್ತು. ಆ ಬಳಿಕ ಮಾರ್ಕ್ಸ್ ಅರಾಜಕತಾವಾದಿಯಾಗಿದ್ದ ಬಾಕುನಿನ್‌ನನ್ನೂ ಎದುರಿಸಬೇಕಾಯಿತು. ಕೊನೆಗೂ ಪ್ರಥಮ ಅಂತಾರಾಷ್ಟ್ರೀಯವು ಬಾಕುನಿನ್‌ನ ಅರಾಜಕತಾವಾದದಿಂದಾಗಿ 1876ರಲ್ಲಿ ಕೊನೆಯುಸಿರೆಳೆಯಿತು.

ಪ್ರೌಧಾನ್ ಎಲ್ಲ ಖಾಸಗಿ ಆಸ್ತಿಯನ್ನೂ ಕಳವಿನ ಮ್ಯಾಲು ಎಂಬುದಾಗಿ ವರ್ಣಿಸಿದ್ದನಾದರೂ ಆತ ವಾಸ್ತವವಾಗಿ ಸಣ್ಣ-ಪುಟ್ಟ ಆಸ್ತಿಯ ಒಡೆಯರ ವಕ್ತಾರನಾಗಿದ್ದ. ಪ್ರೌಧಾನ್‌ನ 'ಬಡತನದ ಸಿದ್ಧಾಂತ'ವನ್ನು ಖಂಡಿಸಿ ಮಾರ್ಕ್ಸ್, "ಸಿದ್ಧಾಂತದ ಬಡತನ"ವೆಂಬ ಹೊತ್ತಿಗೆಯನ್ನು ಬರೆದರು. ಪ್ರೌಧಾನ್ ವರ್ಗ ಹೋರಾಟದ ತತ್ವ ಒಪ್ಪುವವನಾಗಿರಲಿಲ್ಲ. ಖಾಸಗಿ ಉತ್ಪಾದಕರ ನಡುವೆ ನ್ಯಾಯಯುತ ವಿನಿಮಯ ನಡೆಸುವುದನ್ನು ಆತ ಪ್ರತಿಪಾದಿಸುತ್ತಿದ್ದ.

ರಶಿಯಾದ ಅರಾಜಕತಾವಾದಿಯಾಗಿದ್ದ ಬಾಕುನಿನ್ 1857ರಲ್ಲಿ ರಝಾರ್ ದೊರೆಯಿಂದ ಸೈಬೀರಿಯಾಕ್ಕೆ ಗಡೀಪಾರು ಮಾಡಲ್ಪಟ್ಟಿದ್ದ. ಅಲ್ಲಿಂದ ಆತ ತಪ್ಪಿಸಿಕೊಂಡು ಪಶ್ಚಿಮ ಯುರೋಪನ್ನು ತನ್ನ ಚಟುವಟಿಕೆಗಳ ಕೇಂದ್ರವಾಗಿ ಮಾಡಿಕೊಂಡಿದ್ದು ಮಧ್ಯಮವರ್ಗದ ಬುದ್ಧಿಜೀವಿಗಳ ಜೊತೆಗೆ ಗುಪ್ತ ಸಂಘಟನೆಯೊಂದನ್ನು ರಚಿಸಿ ಅದನ್ನು ಅಂತರಾಷ್ಟ್ರೀಯಕ್ಕೆ ಸೇರ್ಪಡೆಗೊಳಿಸಿದ್ದ. ಅರಾಜಕತೆಯೇ ಅವನ ಸಿದ್ಧಾಂತ. ಇದರ ಪ್ರಕಾರ 'ಪ್ರಭುತ್ವ'ವೆನ್ನುವುದೊಂದು ದುಷ್ಟ ಶಕ್ತಿ. ಎಲ್ಲ ಅಧಿಕಾರವನ್ನೂ ಆತ ವಿರೋಧಿಸುತ್ತಿದ್ದ. ಪ್ರಭುತ್ವವನ್ನು ತಕ್ಷಣ ನಿರ್ನಾಮ ಮಾಡುವುದೇ ಅವನ ಉದ್ದೇಶವಾಗಿದ್ದ ಕಾರಣ ಆತ ಎಲ್ಲ ರಾಜಕೀಯ ಚಟುವಟಿಕೆಗಳನ್ನೂ ವಿರೋಧಿಸುತ್ತಿದ್ದ ಜನರಲ್ಲಿ ಅಂತರ್ಗತವಾಗಿದ್ದ ಸಮಾಜವಾದಿ ಪ್ರಜ್ಞೆಯಲ್ಲಿ ಅವನಿಗೆ ದೃಢವಿಶ್ವಾಸ ಅಂತೆಯೇ ಜನತೆಯ ಸ್ವಯಂಪ್ರೇರಿತ ಕ್ರಾಂತಿಯ ಮನೋಭಾವದಲ್ಲೂ ಆತ ನಂಬುಗೆಯಿರಿಸಿದ್ದ. ಈ ಸಿದ್ಧಾಂತದ ಪ್ರಕಾರ ವರ್ಗವ್ಯತ್ಯಾಸವೆಂಬುದು ಇಲ್ಲವೇ ಇಲ್ಲ ಬಾರೆಲ್‌ನಲ್ಲಿ 1872ರಲ್ಲಿ ನಡೆದ ಅಧಿವೇಶನದಲ್ಲಿ ಬಾಕುನಿನ್ ಭೂಮಿಯ ಮೇಲಿನ ಖಾಸಗಿ ಒಡೆತನ ಕೊನೆಗೊಳ್ಳಬೇಕೆಂದು ಒತ್ತಾಯಿಸಿದ. ಮಾರ್ಕ್ಸ್ ಅವರ ಪ್ರಕಾರ ಈ ಬೇಡಿಕೆಯನ್ನೇನಾದರೂ ಅಂಗೀಕರಿಸಿದ್ದರೆ ಸಮಸ್ತ ರೈತಾಪಿ ಜನತೆ ಕಾರ್ಮಿಕ ವರ್ಗದ ಮಿತ್ರನಾಗುವುದರ ಬದಲು ಪ್ರತಿಗಾಮಿಗಳ ಬಲೆಗೆ ಬೀಳುತ್ತಿತ್ತು. ಬಾಸೆಲ್ ಕಾಂಗ್ರೆಸ್ಸಿನಲ್ಲಿದ್ದ ಮಾರ್ಕ್ಸ್‌ವಾದಿಗಳು ಈ ಬೇಡಿಕೆ ಕಮ್ಯುನಿಸ್ಟ್ ಪ್ರಣಾಳಿಕೆಯಲ್ಲಿ ಘೋಷಿಸಲ್ಪಟ್ಟಿರುವ ಉದ್ದೇಶಗಳಲ್ಲಿ ಒಂದಾಗಿದೆಯೆಂದು ವಾದಿಸಿದರೂ ಫಲವಾಗದೆ ಬಾಕುನಿನ್ ಅಂತರಾಷ್ಟ್ರೀಯವನ್ನು ಒಡೆಯಲು ಮುಂದಾದ. ಈ ಉದ್ದೇಶಕ್ಕಾಗಿ ಅತ ಮುಖ್ಯವಾಗಿ ಗ್ರಾಮಾಂತರ ಕಾರ್ಮಿಕರು ಮತ್ತು ಅಲೆಮಾರಿ ದುಡಿಮೆಗಾರರೇ ಮುಂತಾದ ಕಾರ್ಮಿಕ ವರ್ಗದ ಹಿಂದುಳಿದ ವಿಭಾಗಗಳನ್ನು ಬಳಸಿಕೊಂಡ.

ಅಂತರಾಷ್ಟ್ರೀಯವು ಇನ್ನೂ ಅಸ್ತಿತ್ವದಲ್ಲಿದ್ದಾಗ ಜರ್ಮನಿ ಮತ್ತು ಫ್ರಾನ್ಸ್‌ಗಳ ನಡುವೆ ಯುದ್ಧ ನಡೆಯು

ದುಡಿಯುವ ವರ್ಗ

ವುದನ್ನು ತಪ್ಪಿಸಲು ಸಾರ್ವತ್ರಿಕ ಮುಷ್ಕರವೊಂದನ್ನು ಸಂಘಟಿಸಲು ಪ್ರಯತ್ನಿಸಲಾಯಿತು. ಅಲ್ಸೇ ಲೊರಾಯಿನ್ ಪ್ರಾಂತ್ಯವನ್ನು ಕಬಳಿಸಲು ಜರ್ಮನಿ ನಡೆಸುತ್ತಿದ್ದ ಪ್ರಯತ್ನಕ್ಕೆ ಜರ್ಮನ್ ಸೋಶಿಯಲ್ ಡೆಮಾಕ್ರಟಿಕ್ ಪಾರ್ಟಿ ಸಹಕಾರ ನೀಡುವುದಿಲ್ಲವೆಂದು ಘೋಷಿಸಿತು. ಜರ್ಮನ್ ಸೋಷಿಯಲ್ ಡೆಮೊಕ್ರೆಟ್ ಪಾರ್ಲಿಮೆಂಟ್ ಸದಸ್ಯರು ಸಂಸತ್ತಿನಲ್ಲಿ ಯುದ್ಧದ ಸೂಚನೆಗೆ ವಿರುದ್ಧವಾಗಿ ಮತ ಚಲಾಯಿಸಿದರು. ಆದರೂ ಕಾರ್ಮಿಕ ವರ್ಗದ ಪಕ್ಷದ ಮುಂದಾಳುಗಳು ದಸ್ತಗಿರಿಯಾಗಬೇಕಾಯಿತು. ಸಾರ್ವತ್ರಿಕ ಮುಷ್ಕರ ವಿಫಲವಾಯಿತು. ಜರ್ಮನಿಯು ಫ್ರಾನ್ಸಿನ ಭೂಭಾಗವನ್ನು ಕಬಳಿಸಿತು. ಈ ಎಲ್ಲ ರಾಜಕೀಯ ವಿದ್ಯಮಾನಗಳ ಫಲಸ್ವರೂಪವಾಗಿ ಫ್ರಾನ್ಸಿನ ದುಡಿಯುವ ವರ್ಗ 1871ರಲ್ಲಿ ಪ್ಯಾರಿಸ್ ಕಮ್ಯೂನನ್ನು ಸಂಘಟಿಸಿತು. ಫ್ರಾನ್ಸಿನ ರಾಷ್ಟ್ರೀಯ ರಕ್ಷಣಾ ಭಟರು ಬಂಡೆದ್ದು ಮೊತ್ತ ಮೊದಲಬಾರಿಗೆ ಕಾರ್ಮಿಕ ವರ್ಗದ ಪ್ರಭುತ್ವವೊಂದನ್ನು ಸ್ಥಾಪಿಸಿದರು. ಆದರೆ ಕಮ್ಯೂನ್ ಬಹಳ ಕಾಲ ಉಳಿಯಲಿಲ್ಲ. ಬ್ರಿಟನ್ ಮತ್ತು ಫ್ರಾನ್ಸಿನ ಆಳುವ ವರ್ಗಗಳು ಒಂದಾಗಿ ಪ್ಯಾರಿಸ್ ಕಮ್ಯೂನನ್ನು ರಕ್ತದಲ್ಲಿ ತೋಯಿಸಿಬಿಟ್ಟರು. ಮಾರ್ಕ್ಸ್ ಅವರ ಅಭಿಮತದಂತೆ ಪ್ಯಾರಿಸ್ ಕಮ್ಯೂನ್ ಕಲಿಸಿಕೊಡುವ ಪಾಠ ಇಷ್ಟೇ. ಕಾರ್ಮಿಕ ವರ್ಗವು ಬಂಡವಾಳಶಾಹಿ ಪ್ರಭುತ್ವದ ಯಂತ್ರವನ್ನು ಕಾರ್ಮಿಕವರ್ಗ ನಿರ್ನಾಮ ಮಾಡಿ ಅದರ ಸ್ಥಾನದಲ್ಲಿ ದುಡಿಯುವ ವರ್ಗದ ಸರ್ವಾಧಿಕಾರವನ್ನು ಸ್ಥಾಪಿಸಿಕೊಂಡರೆ ಮಾತ್ರ ಕ್ರಾಂತಿಯನ್ನು ಸಂರಕ್ಷಿಸಲು ಸಾಧ್ಯ.

ಅರಾಜಕತಾವಾದಿಗಳು ಅಂತರರಾಷ್ಟ್ರೀಯವನ್ನು ನಾಶಮಾಡುತಿದ್ದ ಕಾಲದಲ್ಲೇ ಬ್ರಿಟನ್ನಿನ ಕಾರ್ಮಿಕ ಸಂಘಟನೆಗಳು ಲಿಬರಲ್ ಪಕ್ಷದ ಪುರೋಗಾಮಿಗಳ ಜೊತೆ ಸೇರಿ ತಮ್ಮ ಸಾಮಾಜಿಕ ಅಂತಸ್ತನ್ನು ಏರಿಸಿಕೊಳ್ಳುವ ಸನ್ನಾಹ ನಡೆಸಿದವು. ಇಂಗ್ಲೆಂಡಿನ ಕಾರ್ಮಿಕ ವರ್ಗ ಸಮೃದ್ಧಿಯಲ್ಲಿ ಪಾಲು ಪಡೆಯಲಾರಂಭಿಸಿತ್ತಲ್ಲದೆ ಲೆನಿನ್ ಮುಂದೆ ವಿವರಿಸಿರುವಂತೆ ಪ್ರತಿಷ್ಟಿತ ವರ್ಗವಾಗುತ್ತಿತ್ತು. ಪ್ರಥಮ ಅಂತರರಾಷ್ಟ್ರೀಯವನ್ನು 1876ರಲ್ಲಿ ಬರ್ಖಾಸ್ತುಗೊಳಿಸಲಾಯಿತು. ಆದರ ಸ್ಥಾನದಲ್ಲಿ ಕಾರ್ಮಿಕ ವರ್ಗದ ರಾಷ್ಟ್ರೀಯ ಮಟ್ಟದ ಪಕ್ಷಗಳು ಕಾಣಿಸಿಕೊಂಡವು.

ಕಾರ್ಮಿಕ ವರ್ಗದ ಪಕ್ಷಗಳು 1890ರೊಳಗೆ ಮತ್ತೊಮ್ಮೆ ಸೇರಿ ಎರಡನೇ ಅಂತರರಾಷ್ಟ್ರೀಯವನ್ನು ಸ್ಥಾಪಿಸಿದವು. ಅಮೇರಿಕಾ ಮತ್ತು ಯುರೋಪಿನ ಕಾರ್ಮಿಕ ವರ್ಗವು ಮೇ 1. 1890ರಂದು ಪ್ರದರ್ಶನ ನಡೆಸುವ ಮೂಲಕ ಎಂಟು ಗಂಟೆಗಳ ದುಡಿಮೆಯನ್ನು ಒತ್ತಾಯಿಸಿತು. ವೈಯುಕ್ತಿಕವಾಗಿ ಬಂಡವಾಳಗಾರರ ಮುಂದೆ ಈ ಬೇಡಿಕೆಯನ್ನೊಡ್ಡುವ ಬದಲು ಬಂಡವಾಳಶಾಹಿ ಪ್ರಭುತ್ವಗಳ ಮುಂದೆಯೇ ಅದನ್ನು ಇರಿಸಲಾಯಿತು. ಅರಾಜಕತಾವಾದಿಗಳನ್ನು ದ್ವಿತೀಯ ಅಂತರರಾಷ್ಟ್ರೀಯದಿಂದ ಹೊರಗಿಡಲಾಗಿತ್ತು. ರಾಜಕೀಯ ಚಟುವಟಿಕೆಗಳನ್ನು ನಡೆಸಲು ಸಮ್ಮತಿಸುವ ಪಕ್ಷಗಳನ್ನು ಮಾತ್ರವೇ ದ್ವಿತೀಯ ಅಂತರರಾಷ್ಟ್ರೀಯಕ್ಕೆ ಆಮಂತ್ರಿಸಲಾಗಿತ್ತು.

ದ್ವಿತೀಯ ಅಂತರಾಷ್ಟ್ರೀಯವು ಸಂಘಟಿತವಾಗುತ್ತಿದ್ದ ಕಾಲದಲ್ಲೇ ದುಡಿಯುವ ವರ್ಗದ ಪಕ್ಷಗಳು ಬೆಳೆದು ಬರಲಾರಂಭಿಸಿದ್ದವು. ಅವು ತಮ್ಮ ತಮ್ಮ ಸರಕಾರಗಳ ಕೈಯಿಂದ ರಿಯಾಯತಿಗಳನ್ನು ಸವಲತ್ತುಗಳನ್ನೂ ಗೆದ್ದುಕೊಳ್ಳಲಾರಂಭಿಸಿದ್ದವು.

ಇದೇ ಹೊತ್ತಿಗೆ ಬಂಡವಾಳಶಾಹಿಯೂ ಬೆಳೆದು ಬರುತಿತ್ತಲ್ಲದೆ ಅದು ಕಾರ್ಮಿಕ ವರ್ಗದೊಂದಿಗೆ ಸಮೃದ್ಧಿಯನ್ನು ಹಂಚಿಕೊಳ್ಳುತಿತ್ತು. ಅಭಿವೃದ್ಧಿ ಹೊಂದಿದ ರಾಷ್ಟ್ರಗಳ ಕಾರ್ಮಿಕ ವರ್ಗದ ಪಕ್ಷಗಳು ಕ್ರಮೇಣ ಕ್ರಾಂತಿಕಾರಿ ಕಾರ್ಯಕ್ರಮವನ್ನು ತೊರೆದು ಬಂಡವಾಳಶಾಹಿ ಪದ್ಧತಿಗೆ ಹೊಂದಿಕೊಳ್ಳಲಾರಂಭಿಸಿದವು; ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯನ್ನು ಕೈಬಿಟ್ಟು ಬೂರ್ಜ್ವಾ ರಾಷ್ಟ್ರೀಯವಾದವನ್ನು ಅಂಗೀಕರಿಸಿದವು.

ಮಾರ್ಕ್ಸ್‌ವಾದಿ ವಿಚಾರಧಾರೆಯನ್ನು ಸಾಮ್ರಾಜ್ಯಶಾಹಿಯ ಹಂತದ ವರೆಗೆ ಅಭಿವೃದ್ಧಿಪಡಿಸಿದ ಶ್ರೇಯಸ್ಸು ಲೆನಿನ್ ಅವರಿಗೆ ಸಲ್ಲುತ್ತದೆ. ಬಂಡವಾಳಶಾಹಿ ಅಭಿವೃದ್ಧಿಯು ಏಕಸ್ವಾಮ್ಯದ ಬೆಳವಣಿಗೆಗೆ ಹೇಗೆ ಕಾರಣವಾಗುತ್ತದೆ, ಉತ್ಪಾದನಾ ಸಾಧನಗಳ ಕೇಂದ್ರೀಕರಣ, ಟ್ರಸ್ಟ್‌ಗಳ ನಿರ್ಮಾಣ ಕೈಗಾರಿಕಾ ಮತ್ತು ಬ್ಯಾಂಕಿಂಗ್ ಬಂಡವಾಳಗಳ ಸಮ್ಮಿಲನ ಮತ್ತು ಅದು ಹಣಕಾಸಿನ ಬಂಡವಾಳವಾಗುವ ರೀತಿ, ಬಂಡವಾಳದ ನಿರ್ಯಾತ, ಮಾರುಕಟ್ಟೆಯ ಮೇಲಿನ ನಿಯಂತ್ರಣಕ್ಕಾಗಿ ಅಭಿವೃದ್ಧಿ ಹೊಂದಿದ ಕೆಲವೇ ರಾಷ್ಟ್ರಗಳ ನಡುವೆ ಸ್ಪರ್ಧೆ, ರಾಜ್ಯಗಳ ಏಕೀಕರಣ, ವಿಭಜನೆ ಮತ್ತು ಪುನರ್ವಿಂಗಡನೆಗಾಗಿ ನಡೆಸಲ್ಪಡುವ ಯುದ್ಧ ಇವೆಲ್ಲ ಹೇಗಾಗುತ್ತವೆ ಎಂಬುದನ್ನು ಲೆನಿನ್ ವಿಷದ ಪಡಿಸಿದ್ದಾರೆ.

ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿರುವ ಕಾರ್ಮಿಕವರ್ಗದ ಪಕ್ಷಗಳು ತಮ್ಮ ರಾಷ್ಟ್ರಗಳ ಆಳುವ ವರ್ಗಗಳು ನಡೆಸುವ ಯುದ್ಧಗಳಿಗೆ ಬೆಂಬಲ ನೀಡಬಾರದೆನ್ನುವುದು ಕಾರ್ಮಿಕ ವರ್ಗದ ಅಂತರರಾಷ್ಟ್ರೀಯತೆಯ ನೀತಿ. ಸಾಮ್ರಾಜ್ಯಶಾಹಿ ರಾಷ್ಟ್ರಗಳಲ್ಲಿ ಕಾರ್ಮಿಕ ವರ್ಗದ ಕ್ರಾಂತಿಯನ್ನು ಯಶಸ್ವಿಯಾಗಿ ನಡೆಸಿದರೆ ಅದರಿಂದಾಗಿ ವಸಾಹತು ರಾಷ್ಟ್ರಗಳಲ್ಲೂ ರಾಷ್ಟ್ರೀಯ ವಿಮೋಚನಾ ಹೋರಾಟಗಳು ಯಶಸ್ವಿಯಾಗಿ ನಡೆಯುವುದು ಸಾಧ್ಯವಾಗುತ್ತದೆ.

ದ್ವಿತೀಯ ಅಂತರ್‌ರಾಷ್ಟ್ರೀಯದ ಸೋಷಿಯಲ್ ಡೆಮೋಕ್ರಟಿಕ್ ಮುಂದಾಳುಗಳು ದುಡಿಯುವ ವರ್ಗಕ್ಕೆ ದ್ರೋಹಬಗೆದು 'ತಮ್ಮದೇ' ರಾಷ್ಟ್ರಗಳ ಆಡಳಿತ ವರ್ಗಗಳೊಂದಿಗೆ ಸೇರಿಕೊಂಡರು. ಆದರೂ 1917ರಲ್ಲಿ ರಶಿಯಾದಲ್ಲಿ ಬೊಲ್ಶೆವಿಕರು ಲೆನಿನ್ ಅವರ ನೇತೃತ್ವದಲ್ಲಿ ನಡೆಸಿದ ಅಕ್ಟೋಬರ್ ಕ್ರಾಂತಿ ಯಶಸ್ವಿಯಾಯಿತು. ಸಾಮ್ರಾಜ್ಯಶಾಹಿಯಲ್ಲಿನ ದುರ್ಬಲ ಕೊಂಡಿಯೊಂದು ಹೀಗೆ ಕಳಚಿಹೋಯಿತು ಪ್ರಪಂಚದಲ್ಲೇ ಮೊದಲಬಾರಿಗೆ ಸಮಾಜವಾದಿ ರಾಷ್ಟ್ರವೊಂದರ ಉದಯವಾಯಿತು. ಅಂದಿನ ರಶಿಯಾದ ದುಡಿಯುವ ವರ್ಗವು ಸಾಮ್ರಾಜ್ಯಶಾಹಿಗಳು ನಡಸಲು ಯತ್ನಿಸಿದ್ದ ಪಿತೂರಿಗಳ ವಿರುದ್ಧ ಧೀರೋದಾತ್ತ ಹೋರಾಟ ನಡೆಸಿ, ಅದನ್ನು ಸೋಲಿಸಿತು. 1923ರಲ್ಲಿ ಸೋವಿಯತ್ ಒಕ್ಕೂಟದ ಸ್ಥಾಪನೆಯಾಯಿತು.

ಲೆನಿನ್ ಮೊದಲಿಗೆ ಕೌಟ್ಸ್ಕಿಯ ತತ್ವಾಂಧತೆಯನ್ನೂ ಇತರ ಹಲವಾರು ಪರಿಷ್ಕರಣವಾದಿಗಳನ್ನೂ ಬಳಿಕ ಟ್ರಾಟ್ಸ್ಕಿಯನ್ನೂ ಇದಿರಿಸಬೇಕಾಯಿತು. ಟ್ರಾಟ್ಸ್ಕಿ ತಕ್ಷಣ ಜಗತ್ತಿನ ಎಲ್ಲೆಡೆ ಕ್ರಾಂತಿಯಾಗಬೇಕೆಂಬ ಸಿದ್ಧಾಂತವನ್ನು ಹುರುಪಾಗಿ ಪ್ರತಿಪಾದಿಸುತ್ತಿದ್ದ. ಲೆನಿನ್ ಅವರ 'ಕಾರ್ಮಿಕ ವರ್ಗದ ಸರ್ವಾಧಿಕಾರ' ಸಿದ್ಧಾಂತಕ್ಕೆ ವಿರುದ್ಧವಾಗಿದ್ದ. 'ನಿರಂತರ ಕ್ರಾಂತಿಯ' ಸಿದ್ಧಾಂತಕ್ಕೂ ಟ್ರಾಟ್ಸ್ಕಿ ಅಂಟಿಕೊಂಡಿದ್ದ.

ಲೆನಿನ್ ಅವರ ಮುಂದಾಳತ್ವದಲ್ಲಿ ತೃತೀಯ ಅಂತರ್‌ರಾಷ್ಟ್ರೀಯವು 1919ರಲ್ಲಿ ಸ್ಥಾಪಿಸಲ್ಪಟಿತು. ಮಾಸ್ಕೊ ಕೇಂದ್ರವಾಗಿದ್ದ ತೃತೀಯ ಅಂತರ್‌ರಾಷ್ಟ್ರೀಯವು 1943ರವರೆಗೆ ಅಸ್ತಿತ್ವದಲ್ಲಿತ್ತು

ಯೂರೋಪಿನ ಕಾರ್ಮಿಕ ವರ್ಗದ ವೈಫಲ್ಯದಿಂದಾಗಿ ಅಲ್ಲಿ ಫ್ಯಾಸಿಸಂ ಬೆಳೆದುಬಂತು. ಫ್ಯಾಸಿಸಂ ಅಂದರೆ ಗುತ್ತೇದಾರಿ ಬಂಡವಾಳಶಾಹಿಯ ಆಧಿಪತ್ಯ. ಅದು ಎಲ್ಲ ವರ್ಗಗಳನ್ನೂ ತನ್ನ ಅಡಿಯಲ್ಲಿರಿಸುತ್ತದೆ. ಈ ಹಿನ್ನೆಲೆಯಲ್ಲಿ ಕಮ್ಯುನಿಸ್ಟ್ ಅಂತರ್‌ರಾಷ್ಟ್ರೀಯದ ಏಳನೇ ಕಾಂಗ್ರೆಸ್ ಫ್ಯಾಸಿಸಂನ ವಿರುದ್ಧ ಸಂಯುಕ್ತ ರಂಗವೊಂದರ ಸಿದ್ಧಾಂತವನ್ನು ಅಂಗೀಕರಿಸಿತಲ್ಲದೆ ಜಗತ್ತಿನ ಎಲ್ಲೆಡೆ ಇರುವ ಕಮ್ಯುನಿಷ್ಟರು ಪ್ರಜಾಸತ್ತೆಯ ಉಳಿವಿಗಾಗಿ ಹೋರಾಡಬೇಕೆಂದು ಕರೆಯಿತ್ತಿತ್ತು.

ಎರಡನೇ ಮಹಾಯುದ್ಧ ಆರಂಭವಾದಾಗ ಹಿಟ್ಲರ್‌ನ ಸೈನ್ಯ ಸೋವಿಯತ್ ರಶಿಯಾವನ್ನು ಧೂಳಿಪಟ ಮಾಡುವುದೆಂದು ಸಾಮ್ರಾಜ್ಯಶಾಹಿಗಳೆಲ್ಲ ಆಶಿಸಿಕೊಂಡಿದ್ದರು. ಆದರೆ ಸ್ಟಾಲಿನ್ ಅನುಸರಿಸಿದ ಮುತ್ಸದ್ದಿತನದಿಂದಾಗಿ ಶತ್ರುವು ಸಾಮ್ರಾಜ್ಯಶಾಹಿ ರಾಷ್ಟ್ರಗಳ ಮೇಲೆಯೇ ಗಮನ ಹರಿಸುವಂತಾಯಿತು. ಮುಂದೆ ಇದು ಸೋವಿಯತ್ ಒಕ್ಕೂಟದೊಂದಿಗೆ ಫ್ರಾನ್ಸ್ ಇಂಗ್ಲೆಂಡ್ ಮತ್ತು ಅಮೆರಿಕಾಗಳ ಸಂಯುಕ್ತರಂಗವೊಂದರ ನಿರ್ಮಾಣ ಮಾಡಿಕೊಳ್ಳುವುದಕ್ಕೂ ಅಂತಿಮವಾಗಿ ಫ್ಯಾಸಿಸಂನ ಸೋಲಿಗೂ ಕಾರಣವಾಯಿತು. ಸೋವಿಯತ್ ಒಕ್ಕೂಟವು ಫ್ಯಾಸಿಸ್ಟ್ ಆಕ್ರಮಣಕಾರರನ್ನು ಸೋಲಿಸಿ ಹಿಮ್ಮೆಟ್ಟಿಸಿದುದೇ ಅಲ್ಲದೇ ಹಿಟ್ಲರನ ಆಕ್ರಮಣಕ್ಕೊಳಗಾಗಿದ್ದ ಎಲ್ಲ ರಾಷ್ಟ್ರಗಳನ್ನು ವಿಮೋಚನೆಗೊಳಿಸಿತು ಸೋವಿಯತ್ ಸೈನ್ಯದ ನೆರವಿನಿಂದ ಅನೇಕ ರಾಷ್ಟ್ರಗಳು ವಿಮೋಚನೆ ಪಡೆದವು. ಸಮಾಜವಾದಿ ರಾಷ್ಟ್ರಗಳ ಪ್ರತ್ಯೇಕ ಬಣವೊಂದು ಜನ್ಮತಳೆಯಿತು.

ಇದಾದಮೇಲೆ ಸಾಮ್ರಾಜ್ಯಶಾಹಿಗಳು ತಮ್ಮೆಲ್ಲ ವಸಾಹತುಗಳನ್ನು ಒಂದರ ಹಿಂದೆಒಂದರಂತೆ ಕಳೆದುಕೊಂಡರು ಚೀನಾ ಮತ್ತು ಉತ್ತರಕೊರಿಯಾಗಳು ನಡೆಸಿದ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟಗಳಿಂದಾಗಿ ಅವು ಜಪಾನಿನ ಸಾಮ್ರಾಜ್ಯಶಾಹಿಗಳಿಂದ ಮುಕ್ತವಾದವು. ಎರಡನೇ ಮಹಾಯುದ್ಧದ ನಂತರ ಕೊನೆಯದಾಗಿ ಸಮಾಜವಾದಿ ಬಣವನ್ನು ಸೇರಿಕೊಂಡ ರಾಷ್ಟ್ರಗಳೆಂದರೇ ವಿಯಟ್ನಾಂ. ಕಂಪೂಚಿಯಾ ಮತ್ತು ಲಾವೋಸ್.

ಹಿಂದೆ ವಸಾಹತುಗಳಾಗಿದ್ದು ಹೊಸದಾಗಿ ಸ್ವಾತಂತ್ರ್ಯಗಳಿಸಿರುವ ಈ ರಾಷ್ಟ್ರಗಳೂ ಸಮಾಜವಾದಿ ಬಣದ ರಾಷ್ಟ್ರಗಳ ಜೊತೆಗೂಡಿ ಸಾಮ್ರಾಜ್ಯಶಾಹಿಯ ಈ ತಂತ್ರಗಳನ್ನು ವಿರೋಧಿಸಿ ಹೋರಾಡುತ್ತಿವೆ.

ಸಾಮ್ರಾಜ್ಯಶಾಹಿಗಳು ತೀರ ಗಂಭೀರವಾದ ಮುಗ್ಗಟ್ಟಿನ ಹೊರೆಯಲ್ಲಿ ಸಿಲುಕಿಕೊಂಡಿವೆ. ತಮ್ಮ ಅರ್ಥವ್ಯವಸ್ಥೆಯನ್ನು ಗಂಡಾಂತರದಿಂದ ಬಚಾಯಿಸಿಕೊಳ್ಳುವ ಸಲುವಾಗಿ ಅವು ಹೆಚ್ಚು ಶಸ್ತ್ರಾಸ್ತ್ರ ತಯಾರಿಕೆಯಲ್ಲಿ ತೊಡಗಿವೆ. ಅಭಿವೃದ್ಧಿ ಹೊಂದಿರುವ ಈ ದೇಶಗಳ ದುಡಿಯುವ ವರ್ಗಗಳು ಸ್ವತಃ ತಮ್ಮ ಪಾತ್ರವನ್ನು ಮರಳಿಕಂಡುಕೊಳ್ಳುತ್ತಿವೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ನಡುವಣ ವೈರುಧ್ಯಗಳೂ, ವ್ಯಾಪಾರೀ ಯುದ್ಧಗಳೂ ಇಲ್ಲಿ ಕಾಣಿಸಿಕೊಳ್ಳುತ್ತಿವೆ. ತೃತೀಯ ಜಗತ್ತಿನ ಜನತೆಯನ್ನು ಅಡಿಯಾಳುಗಳಾಗಿ ಇರಿಸಿಕೊಳ್ಳುವುದನ್ನು ಈ ರಾಷ್ಟ್ರಗಳ ಜನ ಪ್ರತಿಭಟಿಸುತ್ತಿದ್ದಾರೆ. ಈ ಎಲ್ಲ ಚಳುವಳಿಗಳ ಮಂಚೂಣಿಯಲ್ಲಿ ಸಮಾಜವಾದಿಗಳ ಒಕ್ಕೂಟವು ಸಾಮ್ರಾಜ್ಯಶಾಹಿಗಳಿಂದ ಬರುವ ಎಲ್ಲ ಅಪಾಯಗಳನ್ನೂ ಎದುರಿಸಲು ಸನ್ನದ್ಧವಾಗಿ ನಿಂತಿವೆ.

ಮಾನವ ಕುಲದ ಐದನೇ ಎರಡು ಭಾಗದಷ್ಟು ಮಂದಿ ಈಗಾಗಲೇ ಸಮಾಜವಾದಿ ವ್ಯವಸ್ಥೆಯನ್ನು ಅಂಗೀಕರಿಸಿದ್ದಾರೆ. ದುಡಿಯುವ ಜನರ ಶತ್ರುಗಳು ಈ ಹಿಂದೆ ಅಪಪ್ರಚಾರ ಮಾಡುತ್ತಿದ್ದಂತೆ ಸಮಾಜವಾದವೆನ್ನುವುದು ಕೇವಲ ಕನಸಿನ ರಾಜ್ಯವಾಗಿ ಈಗ ಉಳಿದಿಲ್ಲ. ಮಾರ್ಕ್ಸ್ ತೀರಿಕೊಂಡು ನೂರು ವರ್ಷಗಳಾಗಿವೆ; ಆದರೆ ಮಾರ್ಕ್ಸ್‌ವಾದ ಜೀವಂತವಾಗೇ ಇದೆ. ಮಾರ್ಕ್ಸ್ ಹೇಳಿದ್ದ ರೀತಿಯಲ್ಲೇ ಮಾರ್ಕ್ಸ್‌ವಾದ ಒಂದಾದನಂತರ ಒಂದರಂತೆ ವಿಜಯಗಳನ್ನು ಸಂಪಾದಿಸಿದೆ.

ಜಗತ್ತು ವರ್ಗ ಸಮಾಜವನ್ನು ಸಮಾಪ್ತಿಗೊಳಿಸಿ. ಸಮಾಜವಾದವನ್ನೂ ಸಮತಾವಾದವನ್ನೂ ಅಂಗೀಕರಿಸುವುದು ಖಂಡಿತ. ಅಂತಹ ಸಮಾಜದಲ್ಲಿ ಮನುಷ್ಯ ತನ್ನನ್ನು ಬಂಧಿಸಿರುವ ಸ್ಥಿತಿಗತಿಗಳಿಂದ ಬಿಡುಗಡೆಗೊಳಿಸುವುದೂ ಅಷ್ಟೆ ಖಚಿತ.

ವಿ. ಜೆ. ಕೆ. ನಾಯರ್.

ಕೇಂದ್ರ ಸರ್ಕಾರ ವಿಧಿಸಿರುವ ತೆರಿಗೆಗಳು ವಾಪಸ್ಸಾಗಲಿ

ಕೇಂದ್ರ ಸರ್ಕಾರ ಬಡ ಜನ ಉಪಯೋಗಿಸುವ ಸೀಮೆಎಣ್ಣೆ ದರ ಏರಿಸಿ ತನ್ನ ಜನ ವಿರೋಧೀ ನೀತಿಯನ್ನು ವ್ಯಕ್ತಪಡಿಸಿದೆ. ಇದರಿಂದಾಗಿ ಹಳ್ಳಿ ಪ್ರದೇಶಗಳಲ್ಲಿ ಜನರು ಒಂದು ಲೀಟರ್ ಸೀಮೆಎಣ್ಣೆಗೆ ರೂ. 1-85ರ ಬದಲು ರೂ. 3-30 ರಿಂದ 3-50ರ ವರೆಗೆ ಕೊಡಬೇಕಾಗಿ ಬಂದಿದೆ. ಇದೂ ಸಹ ಕೆಲವರಿಗೆ ಸಿಗುತ್ತಿಲ್ಲ. ರಾಜ್ಯ ಸರ್ಕಾರ ಕೇಂದ್ರ ಸರ್ಕಾರದ ಈ ನೀತಿಯನ್ನು ಪ್ರತಿಭಟಿಸಬೇಕು ಮತ್ತು ಹಳ್ಳಿ ಪ್ರದೇಶದಲ್ಲಿ ರೇಷನ್‌ಕಾರ್ಡಿನಲ್ಲಿ ಸೀಮೆಎಣ್ಣೆ ರೂ. 1-85ಕ್ಕೆ ಸಿಕ್ಕುವಹಾಗೆ ಮಾಡಲು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ಒತ್ತಾಯಮಾಡುತ್ತೇನೆ ಎಂದು ಶಾಸನ ಸಭೆಯ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಗುಂಪಿನ ನಾಯಕರಾದ ಶಾಸಕ ಶ್ರೀ ಎಸ್.ಸೂರ್ಯನಾರಾಯಣರಾವ್‌ರವರುಹೇಳಿಕೆ ನೀಡಿದ್ದಾರೆ

ಕೇಂದ್ರ ಸರ್ಕಾರ ಪಾರ್ಲಿಮೆಂಟ್ ಅಧಿವೇಶನ ನಡೆಯುತ್ತಿರುದಾಗಲೇ ರೈಲ್ವೇ ದರ, ಅಂಚೆ ದರ ಏರಿಸುವ ಕ್ರಮ ಐ.ಎಂ.ಎಫ್. ಸಾಲದ ಷರತ್ತಿಗನುಗುಣವಾಗಿ ತೆಗೆದುಕೊಂಡಿದೆ. ಈ ಜನ ವಿರೋಧೀ ನೀತಿಯನ್ನು ಜನತೆ ಐಕ್ಯದಿಂದ ಪ್ರತಿಭಟಿಸಿ, ಕೇಂದ್ರ ಸರಕಾರ ಈ ಹೊಸ ತೆರಿಗೆಗಳನ್ನು ಪುನಹ ಪರಿಶೀಲನೆ ಮಾಡುವಹಾಗೆ ಒತ್ತಾಯ ಮಾಡುತ್ತೇನೆ. ಎಂದು ತಿಳಿಸಿದ್ದಾರೆ.

ಜಪ್ಪಿನ ಮೊಗರು ಬೀಡಿ ಕಾರ್ಮಿಕರ ಸಭೆ

ಜಪ್ಪಿನ ಮೊಗರು ಬೀಡಿ ಕಾರ್ಮಿಕರ ಸಭೆಯು ತಾರೀಖು 13-2-83ರಂದು ಶ್ರೀಮತಿ ಸುಶೀಲ ಅವರ ಅಧ್ಯಕ್ಷತೆಯಲ್ಲಿ ಸೇರಿತ್ತು. ಬೀಡಿ ಕಾರ್ಮಿಕರನ್ನು ಜೆ. ಸಂಜೀವರವರು ಸ್ವಾಗತಿಸಿದರು.

ಅಳಪೆ ಪ್ರದೇಶದ ಬೀಡಿ ಲೇಬರ್ ಯೂನಿಯನ್ನಿನ (C. I. T. U.) ಕಾರ್ಯದರ್ಶಿ ಜೆ. ಬಾಲಕೃಷ್ಣಶೆಟ್ಟಿಯವರು ದ.ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ಸಮಿತಿಯು ಕೈಗೊಂಡ ನಿರ್ಣಯಗಳನ್ನು ವಿವರಿಸಿದರು.

ದ. ಕ. ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ಕಾರ್ಯದರ್ಶಿ ಶ್ರೀ ಯು.ಬಿ. ಲೋಕಯ್ಯನವರು ಮಾತನಾಡುತ್ತಾ ಜಿಲ್ಲೆಯ ಬೀಡಿ ಕಾರ್ಮಿಕರು 12ರೂ. ಮಜೂರಿ, 20% ಬೋನಸ್ಸು, ಕಂಟ್ರಾಕ್ಟರ್ ಪದ್ಧತಿ ಇವೇ ಮೊದಲಾದ ಬೇಡಿಕೆಗಳನ್ನು ಪಡೆಯಲು ಹೋರಾಟಕ್ಕೆ ಸಿದ್ಧತೆಯನ್ನು ನಡೆಸಬೇಕೆಂದು ಕರೆನೀಡಿದರು.

ಕೊನೆಯದಾಗಿ ಸಾವಿರ ಬೀಡಿಗೆ ಮಜೂರಿ ರೂ. 12ರಂತೆ ಪರಿಷ್ಕರಣ ಮಾಡಬೇಕೆಂದು ಒತ್ತಾಯಪಡಿಸುವ ಮನವಿಗೆ ಸಹಸ್ರಾರು ಸಹಿ ಸಂಗ್ರಹಿಸಿ ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಯವರಿಗೆ ಕಳುಹಿಸಲು ನಿರ್ಧರಿಸಲಾಯಿತು.

ಕುಂದಾಪುರ :

ಉಪಹಾರ ಅವ್ಯವಸ್ಥೆ ಸರಿಪಡಿಸಲು ಎಸ್. ಎಫ್. ಐ. ಮನವಿ

ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ನೀಡುವ ಮಧ್ಯಾಹ್ನ ಉಪಾಹಾರವು ಸರಿಯಾಗಿ ಬೇಯುತ್ತಿಲ್ಲವೆನ್ನುವ ವಿಚಾರವನ್ನು ಸರಕಾರದ ಗಮನಕ್ಕೆ ತರುವ ಸಲುವಾಗಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್. ಎಫ್. ಐ.) ಕುಂದಾಪುರ ಟೌನ್ ಸಮಿತಿಯು ಸಂಬಂಧಿತ ಇಲಾಖೆಗಳಿಗೆ ಮನವಿಯನ್ನು ಅರ್ಪಿಸಿದೆ. ಸರಿಯಾಗಿ ಬೇಯದ ಉಪಾಹಾರದಿಂದಾಗಿ ಸಂಭವಿಸಬಹುದಾದ ಅನಾರೋಗ್ಯಕರ ಪರಿಣಾಮಗಳನ್ನು ಪರಿಶೀಲಿಸಿ, ಮಕ್ಕಳ ಆರೋಗ್ಯದ ಹಿತ ರಕ್ಷಣೆಗಾಗಿ ತಕ್ಕ ಕ್ರಮ ಕೈಗೊಳ್ಳಬೇಕೆಂದು ಜಿಲ್ಲಾ ಸಹಾಯಕ ಆರೋಗ್ಯ ಅಧಿಕಾರಿಗಳು ಮತ್ತು ಉಪವಿಭಾಗಾಧಿಕಾರಿಗಳಿಗೆ ನೀಡಿದ ಮನವಿಯಲ್ಲಿ ವಿನಂತಿಸಲಾಗಿದೆ.

ಶೀಘ್ರದಲ್ಲಿ ಈ ಬೇಡಿಕೆಯನ್ನು ಪರಿಶೀಲಿಸಿ ಸೂಕ್ತ ಕ್ರಮ ಕೈಗೊಳ್ಳದಿದ್ದಲ್ಲಿ, ವಿದ್ಯಾರ್ಥಿಗಳಿಂದ ಉಪಾಹಾರವನ್ನು ಬಹಿಷ್ಕರಿಸುವ ತೀವ್ರ ಚಳವಳಿಯನ್ನು ನಡೆಸುವ ತೀರ್ಮಾನವನ್ನು ಎಸ್. ಎಫ್. ಐ. ಟೌನ್ ಸಮಿತಿ ಕೈಗೊಂಡಿದೆ.

ವಿಜಾಪುರ :

ಎಸ್. ಎಫ್. ಐ. ನಿಂದ ಮತೀಯ ಗಲಭೆ ಪ್ರತಿಭಟಿಸಿ ಶಾಂತಿ ಯಾತ್ರೆ

ಇತ್ತೀಚೆಗೆ ವಿಜಾಪುರ ಶಹರಿನಲ್ಲಿ ನಡೆದ ಮತೀಯ ಗಲಭೆಗಳನ್ನು ಪ್ರತಿಭಟಿಸಲು ಹಾಗೂ ಹಿಂದೂ-ಮುಸ್ಲಿಂ ಶಾಂತಿ-ಸೌಹಾರ್ದತೆಗೆ ಕರೆಕೊಡಲು ಎಸ್. ಎಫ್. ಐ. ವಿಜಾಪುರ ಘಟಕ ಹಾಗೂ ಇತರಹಲವಾರು ಜಾತ್ಯಾತೀತ ಸಂಘಟನೆಗಳು ಕೂಡ ದಿನಾಂಕ 24ರ ಫೆಬ್ರವರಿಯಂದು ಆಯೋಜಿಸಿದ ಶಾಂತಿಯಾತ್ರೆಯು ಯಶಸ್ವಿಯಾಗಿ ನೆರವೇರಿತು. ಜಗತ್ಪ್ರಸಿದ್ಧ ಗೋಲ ಗುಮ್ಮಟದಷ್ಟೇ ವಿಜಾಪುರ ನಗರದಲ್ಲಿಯ ಮತೀಯ ಐಕ್ಯತೆಯೂ ಹೆಸರುವಾಸಿಯಾಗಿತ್ತು. ಆದರೆ ಕಳೆದ ರಡು ವರ್ಷಗಳಿಂದ ಆರೆಸ್ಸೆಸ್ ಹಾಗೂ ಜಮಾತ್-ಎ-ಇಸ್ಲಾಮಿ ಸಂಘಟನೆಗಳು ಈ ಸೌಹಾರ್ದಮಯ ವಾತಾವರಣವನ್ನು ಕಲುಷಿತಗೊಳಿಸಲು ಕುತಂತ್ರ ನಡೆಸತೊಡಗಿದ್ದವು. ಇತ್ತೀಚಿನ ವಿಧಾನಸಭೆ ಚುನಾವಣೆಯಲ್ಲಿ ಬಿ.ಜೆ.ಪಿ ಅಭ್ಯರ್ಥಿ ಜಯಗಳಿಸಿದ ನಂತರವಂತೂ ಆರೆಸ್ಸೆಸ್‌ನವರ ದರ್ಪ ಜೋರಾಯಿತು ಮೊನ್ನೆಯ ಗಲಭೆಗಳು ಈ ಎರಡೂ ಕೋಮುವಾದ ವಿಷಶಕ್ತಿಗಳ ಪೂರ್ವ ನಿರ್ಧಾರಿತ ಸುವ್ಯವಸ್ಥಿತ ಕುತಂತ್ರದಿಂದಾಗಿಯೇ ನಡೆದವೆಂಬುದಕ್ಕೆ ಸಾಕಷ್ಟು ಪುರಾವೆಗಳಿವೆ. ಗಲಭೆಯಲ್ಲಿ ಇಡೀ ಕಿರಾಣಾ ಬಾಜಾರ್ ಸುಟ್ಟುಭಸ್ಮವಾದುದಲ್ಲದೇ ಎರಡೂ ಕೋಮಿನವರಿಗೆ ಸೇರಿ ಒಟ್ಟು ಒಂದು ಕೋಟಿ ರೂಪಾಯಿಗಿಂತಲೂ ಹೆಚ್ಚಿನ ಆರ್ಥಿಕ ನಾಶವಾಗಿದೆ. ಶಾಂತಿ ಸ್ಥಾಪನೆಗಾಗಿ ಎಸ್. ಎಫ್. ಐ. ಹಾಗೂ ಮತ್ತಿತರ ಸಂಘಟನೆಯವರು ಗಲಭೆ ಸಂಭವಿಸಿದ ಕೆಲದಿನಗಳಲ್ಲೇ ಕಾರ್ಯನಿರತರಾದದ್ದು ಜನಸಾಮಾನ್ಯರಿಂದಷ್ಟೇ ಅಲ್ಲ ಹಲವಾರು ಉಚ್ಚ ಸರಕಾರಿ-ಅಧಿಕಾರಿಗಳಿಂದಲೂ ಮೆಚ್ಚುಗೆಗೆ ಪಾತ್ರವಾಯಿತು.

ನಗರದಲ್ಲಿ ಭಯಪೂರಿತ ವಾತಾವರಣವಿದ್ದರೂ ಕೂಡ ಸುಮಾರು 400 ಜನ ಶಿಸ್ತುಬದ್ಧವಾದ ಈ ಮೌನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಎಲ್ಲಕ್ಕೂ ಮುಂದೆ ಇಬ್ಬರು ಚಿಕ್ಕಮಕ್ಕಳು ಹಿಂದೂ-ಮುಸ್ಲಿಂ ಭಾಯಿ ಭಾಯಿ ಎಂದು ಬರೆದ ದೊಡ್ಡ ಬ್ಯಾನರ ಹಿಡಿದಿದ್ದರೆ ಇತರ ಅನೇಕ ಶಾಂತಿ ಯಾತ್ರಿಕರು ಆಕರ್ಷಕ ಘೋಷಣಾ ಫಲಕಗಳನ್ನು ಹಿಡಿದಿದ್ದರು. ದುರ್ಘಟನೆ ಸಂಭವಿಸಿದ ಪ್ರತಿಯೊಂದು ಸ್ಥಾನದಲ್ಲೂ ಮೆರವಣಿಗೆ ನಿಂತು, ಚಿಕ್ಕ ಮಕ್ಕಳ ಕೈಯಿಂದ ಶ್ವೇತ ಪಾರಿವಾಳಗಳನ್ನು ಹಾರಿಬಿಡುವಾಗ ಸುತ್ತಲೂ ಸೇರಿದ ಹಲವು ನಾಗರಿಕರು ಕಂಬನಿ ಸುರಿಸುತ್ತಿದ್ದುದು ಕಂಡುಬಂತು. ಆರೆಸ್ಸೆಸ್‌ನವರು ಒಂದೆಡೆ ಮೆರವಣಿಗೆಯನ್ನು ಬಲವಂತವಾಗಿ ತಡೆಗಟ್ಟಿ ಅಸಂಸ್ಕೃತ ರೀತಿಯಲ್ಲಿ ಬೈದು 'ನಮ್ಮ ರಕ್ತ ಹಿಂದೂ ರಕ್ತ' ಎಂದು ಘೋಷಣೆಕೂಗಿದಾಗ ನಾಝಿಯವರ 'ನಮ್ಮ ರಕ್ತ ಸರ್ವಶ್ರೇಷ್ಠ ಆರ್ಯನ್ ರಕ್ತ' ಘೋಷಣೆಯನ್ನೇ ಕೇಳಿದಂತಾಯ್ತು.

ಶಾಂತಿಯಾತ್ರೆಗೆ ಪೂರ್ವಭಾವಿಯಾಗಿ ನಗರದ ಅನೇಕ ಶಾಲೆ ಕಾಲೇಜು ಹಾಸ್ಟೆಲ್ ಹಾಗೂ ಇತರೆಡೆಗಳಲ್ಲಿ ಸಭೆಗಳನ್ನು ಏರ್ಪಡಿಸಲಾಯಿತು. ಸಾವಿರಾರು ಕರಪತ್ರಗಳನ್ನು ಹಂಚಲಾಯಿತು. ಪ್ರತಿಯೊಂದು ಸಭೆಯಲ್ಲೂ ಶಾಂತಿಸ್ಥಾಪನೆಯನ್ನು ಕೇವಲ ಪೋಲೀಸರಿಗೆ ಬಿಟ್ಟು ಕೊಡಲಾಗದೆಂದೂ, ಪೋಲೀಸರು ತರುವ ಶಾಂತಿ ಭಯಪೂರಿತವೂ, ತಾತ್ಕಾಲಿಕವೂ ಎಂದು ಹೇಳಲಾಯಿತಲ್ಲದೆ, ಜನತೆಯ ಮಧ್ಯದಿಂದ ಜಾತ್ಯಾತೀತ ಶಕ್ತಿಗಳು ಧೈರ್ಯದಿಂದ ಮುಂದಾಗುವುದರ, ಒಂದಾಗುವುದರ ಅವಶ್ಯಕತೆಯನ್ನು ಹೇಳಲಾಯಿತು.

ದೇಶದಲ್ಲಿಯ ಎಲ್ಲ ಬಗೆಯ ಕೋಮುವಾದ ಹಾಗೂ ಪ್ರತ್ಯೇಕತಾವಾದಿ ಶಕ್ತಿಗಳಿಗೆ ಸಾಮ್ರಾಜ್ಯಶಾಹಿಗಳ ಬೆಂಬಲವಿದ್ದು, ದೇಶದ ಐಕ್ಯತೆಗೆ ಧಕ್ಕೆ ತರುವ ಕುತಂತ್ರ ಅವರದಾಗಿದೆಯೆಂದೂ ಎತ್ತಿ ತೋರಿಸಲಾಯಿತು. ಒಟ್ಟು ಕಾರ್ಯಕ್ರಮದಲ್ಲಿ ಎಸ್.ಎಫ್.ಐ. ವಿದ್ಯಾರ್ಥಿಗಳೇ ಎಲ್ಲರಿಗಿಂತ ಹೆಚ್ಚು ಸಕ್ರಿಯವಾಗಿ ದುಡಿದರೆಂಬುದು ಹೆಮ್ಮೆಯ ವಿಷಯ ಎಸ್. ಎಫ್. ಐ. ಪರವಾಗಿ ಕಾ. ಯಾದವ, ಸೊನ್ನದ, ಪಟೀಲ, ರಾಠೋಡ, ಸುಜಾತಾ ಉಪಾಧ್ಯಾಯ ನರೇಗಲ್ ಡಾ. ಕಾಮಾಕ್ಷಿ ಭಾಟಿ ಹಾಗೂ ಸುಧೀಂದ್ರ ಕುಲಕರ್ಣಿ ಹಾಗೂ ಇತರ ಸಂಘಟನೆಗಳಲ್ಲಿ ಕಾ. ಅಪ್ಪಾಸಾಬ ಹಾಗೂ ಜಯಲಕ್ಷ್ಮಿ ಯರನಾಳ ಅವರು ವಿಶೇಷವಾಗಿ ಶ್ರಮಿಸಿದರು.

ಹುಬ್ಬಳ್ಳಿ :

ಸರ್ವಸದಸ್ಯರ ಸಭೆ

ತಾ. 13-2-83ರಂದು ಬಿ.ಡಿ.ಕೆ. ಅಲಾಯ್ ಎಂಪ್ಲಾಯಿಸ್ ಯೂನಿಯನ್‌ನ ಸರ್ವ ಸದಸ್ಯರ ಸಭೆ ಗೋಕುಲ ಗ್ರಾಮದಲ್ಲಿ ಸಂಜೆ 6-30 ಗಂಟೆಗೆ ಸೇರಿ ಸರ್ವಾನುಮತದಿಂದ ಈ ಕೆಳಗಿನವರನ್ನು 83-84ನೇ ಸಾಲಿಗೆ ಪದಾಧಿಕಾರಿಗಳನ್ನಾಗಿ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನಾಗಿ ಚುನಾಯಿಸಲಾಗಿದೆ.

—ಪದಾಧಿಕಾರಿಗಳು—

ಕಾ. ವ್ಹಿ.ಎನ್. ಹಳಕಟ್ಟಿ, ಅಧ್ಯಕ್ಷರು ಶ್ರೀ ಜೆ. ಆರ್. ಸುರಪೂರ ಎರ್. ಜಿ. ಬಡಿಗೇರ, ಉಪಾಧ್ಯಕ್ಷರು. ವ್ಹಿ.ಎಂ. ಪೂಜಾರ, ಪ್ರಧಾನ ಕಾರ್ಯದರ್ಶಿ. ಜಿ. ಎಚ್. ಗೋವಿಂದನವರ, ಸಹಾಯಕ ಕಾರ್ಯದರ್ಶಿ. ಪಿ. ಮುರುಲಿಧರ, ಖಜಾಂಚಿ. ವ್ಹಿ. ಜಿ. ಕೆ. ನಾಯರ್, ಕಾಯ್ದೆ ಸಲಹೆಗಾರರು. ಅಲ್ಲದೆ ಆರು ಮಂದಿ ಕಾರ್ಯಕಾರೀ ಸಮಿತಿಸದಸ್ಯರನ್ನು ಚುನಾಯಿಸಲಾಗಿದೆ

ಅಥಣಿ ಎಸ್. ಎಫ್. ಐ. ನಿಂದ ಮಹಿಳಾ ದಿನಾಚರಣೆ

ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್.ಎಫ್.ಐ.) ಅಥಣಿ ಶಾಖೆಯ ವತಿಯಿಂದ ಮಾರ್ಚ 8ರಂದು ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಸ್ಥಳೀಯ ಶಿವಯೋಗಿ ಮುರುಘೇಂದ್ರ ಕಾಲೇಜಿನಲ್ಲಿ ಸಭೆಯೊಂದನ್ನು ಏರ್ಪಡಿಸಲಾಗಿತ್ತು. ಸಭೆಗೆ ಮುಖ್ಯ ಅತಿಥಿಗಳಾಗಿ ವಿಜಾಪೂರದ ಪ್ರಸಿದ್ಧ ಮಹಿಳಾ ಹೋರಾಟಗಾರ್ತಿಯರಾದ ನಜೀಮಾ ಭಾಂಗಿ ಹಾಗೂ ಜಯಲಕ್ಷ್ಮಿ ಯರನಾಳರೂ, ಅಧ್ಯಕ್ಷೆಯಾಗಿ ಡಾ|| ಕಾಮಾಕ್ಷಿ ಭಾಟಿಯವರೂ ಆಗಮಿಸಿದ್ದರು. ಕಿಕ್ಕಿರಿದು ತುಂಬಿದ ಹಾಲಿನಲ್ಲಿ ಅರ್ಧಕ್ಕಿಂತ ಹೆಚ್ಚು ಜನ ಮಹಿಳೆಯರೇ ಇದ್ದುದು ಸಭೆಯ ವೈಶಿಷ್ಟ್ಯವಾಗಿತ್ತು. ಸ್ತ್ರೀ ಮುಕ್ತಿಯ ಗೀತೆಯ ನಂತರ ಮೊದಲಿಗೆ ಮಾತಾಡಿದ ಜಯಲಕ್ಷ್ಮಿಯವರು ಪ್ರಾಚೀನ ಕಾಲದಲ್ಲಿ ಮಾತೃಪ್ರಧಾನವಾಗಿದ್ದ ಸಮಾಜವು ಉತ್ಪಾದನಾ ವ್ಯವಸ್ಥೆ ಬದಲಾದಂತೆಲ್ಲಾ ಪಿತೃಪ್ರಧಾನವಾಗಿ ಮಾರ್ಪಟ್ಟ ಕ್ರಮವನ್ನು ವಿವರಿಸಿದರು. ಅವರು ಬಂಡವಾಳಶಾಹಿ ಸಮಾಜದಲ್ಲಿ ಸ್ತ್ರೀಯರ ಮೇಲೆ ಅನ್ಯಾಯದ ಕಾರಣಮೀಮಾಂಸೆಯನ್ನು ನೀಡಿ, ಸಮಾಜವಾದಿ ದೇಶಗಳಲ್ಲಿ ಮಹಿಳೆಯರ ಸ್ಥಾನ-ಮಾನದಲ್ಲಿ ಉಂಟಾದ ಗಣನೀಯ ಪ್ರಗತಿಯನ್ನು ಉಲ್ಲೇಖಿಸಿದರು. ಸ್ತ್ರೀ ಮುಕ್ತಿಯ ಹೋರಾಟ, ಪುರುಷದ್ವೇಷದ ಆಧಾರದ ಮೇಲೆ ನಿಂತಿದ್ದಲ್ಲ ಎಂದು ಸ್ಪಷ್ಟಪಡಿಸಿದರು. ನಜೀಮಾ ಭಾಂಗಿಯವರು. ಸ್ತ್ರೀಯರು ತಾವು ಅಬಲೆಯರು ಎಂಬ ಭಾವನೆಯನ್ನು ಅಳಿಸಿಕೊಳ್ಳಬೇಕೆಂದು ನುಡಿದರು. ಸ್ತ್ರೀಯರ ಮೇಲೆ ಅನೇಕ ರೀತಿಯಲ್ಲಿ ಸಾಗುತ್ತಿರುವ ಅನ್ಯಾಯದ ವಿರುದ್ಧ ಒಗ್ಗಟ್ಟಿನ ಹೋರಾಟವೊಂದೇ ಹಾದಿಯೆಂದು ಅವರು ಹೇಳಿದರು. ಹಿಂದೂಮುಸ್ಲಿಂ ಐಕ್ಯತೆಯ ಭಾವನೆಯನ್ನು ಮಕ್ಕಳಲ್ಲಿ ಮೂಡಿಸುವುದರ ಹೊಣೆ ತಂದೆ ತಾಯಂದಿರು ಹಾಗೂ ಶಿಕ್ಷಕ-ಶಿಕ್ಷಕಿಯರದೆಂದು ಹೇಳುತ್ತಾ ಪ್ರಸಿದ್ಧ ಕವಿ ಇಕಬಾಲರ "ಮಝಹಬ (ಧರ್ಮ) ನಹೀ ಸಿಖಾತಾ ಆಪಸ ಮೇ ಬೈರ (ವೈರತ್ವ) ರಖನಾ; ಹಿಂದೀ ಹೈ ಹಮ್, ವತನ್ ಹೈ ಹಿಂದುಸ್ತಾನ್ ಹಮಾರಾ" ಎಂಬ ಪದ್ಯವನ್ನು ಅವರು ಉದ್ಧರಿಸಿದಾಗ ಸಭೆಯಲ್ಲಿ ಕರತಾಡನವಾಯಿತು. ಎಸ್.ಎಫ್.ಐ. ಅಥಣಿ ಶಾಖೆಯ ಮಹಿಳಾಕಾರ್ಯಕರ್ತೆ, ತಲಪ್ತಿ ಭಾಟಿಯವರು ಶಿಕ್ಷಣ ಕ್ಷೇತ್ರದಲ್ಲಿ ಮಹಿಳೆಯರಿಗೆ ಸಿಗುವ ತಾರತಮ್ಯದ ಅನುಮಾನಾಸ್ಪದ ವರ್ತನೆಯನ್ನು ಬಲವಾಗಿ ಟೀಕಿಸಿದರು. ಡಾ. ಕಾಮಾಕ್ಷಿ ಭಾಟಿಯವರು ಸ್ತ್ರೀ ಮುಕ್ತಿಯ ಪ್ರಶ್ನೆಯು ಒಟ್ಟು ಆರ್ಥಿಕ-ರಾಜಕೀಯ ವ್ಯವಸ್ಥೆಯ ಒಂದು ಭಾಗವಾದಿದ್ದು ಸಮಾಜದಲ್ಲಿಯ ಇತರ ಶೋಷಿತ ಜನರ ಜೊತೆಗೂಡಿಯೇ ಸ್ತ್ರೀಯರು ತಮ್ಮ ಹೋರಾಟ ಸಾಗಿಸಬೇಕೆಂದು ಹೇಳಿದರು. ಮಾರ್ಚ-8ರ ಉಗಮವೇ ದುಡಿಯುವ ಮಹಿಳೆಯರ ಆಂದೋಲನದಲ್ಲಾದುದನ್ನು ನಾವು ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಅವರು ಹೇಳಿದರು. ಸ್ತ್ರೀಮುಕ್ತಿಗೆ ಸಂಬಂಧಪಟ್ಟ ಪುಸ್ತಕ-ಪತ್ರಿಕೆಗಳ ಪ್ರದರ್ಶನವೊಂದನ್ನು ಈ ಪ್ರಸಂಗದಲ್ಲಿ ಏರ್ಪಡಿಸಲಾಗಿತ್ತು.

ಕುಂದಾಪುರ :

ಡಿ. ವೈ. ಎಫ್. ಐ. ಸಾರ್ವಜನಿಕ ಸಭೆ

ತಾ. 6 ರಂದು ಯುವಜನ ಫೆಡರೇಶನ್ ಕುಂದಾಪುರ ಕೋಡಿ ಶಾಖೆಯು ಏರ್ಪಡಿಸಿದ ಬಹಿರಂಗ ಸಭೆಯಲ್ಲಿ ಅತಿಥಿಗಳಾಗಿ ಶ್ರೀ ಅಪ್ಪಣ್ಣ ಹೆಗ್ಡೆ (ಬೈಂದೂರು) ಎಂ.ಎಲ್.ಎ. ಶ್ರೀ ಎಡ್ವಿನ್ ಕ್ರಾಸ್ತ, ಶ್ರೀ ಮಾಣಿ ಗೋಪಾಲ ಹಾಗೂ ಕಾಂ. ಅಬ್ರಾಹಂ ಕರ್ಕಡ ಉಪಸ್ಥಿತರಿದ್ದರು. ಶ್ರೀ ಮಾಧವ ಎಂ. ಪೂಜಾರಿಯವರು ಅಧ್ಯಕ್ಷತೆ ವಹಿಸಿದ್ದರು.

ಕಡೆಗಣಿಸಲ್ಪಟ್ಟಿರುವ ಕೋಡಿ ಆಸ್ಪತ್ರೆ ಘಟಕದ ಕಾರ್ಯವಿಧಾನ ಸರಿಗೊಳ್ಳುವಂತೆ, ಕೋಡಿಗೆ ಕುಡಿಯುವ ನೀರಿನ ಸರಬರಾಜು ಆಗುವಂತೆ, ಜನವಾಸದ ಮಧ್ಯೆಯಿರುವ ಸ್ಮಶಾನವನ್ನು ನಿರ್ಜನ ಪ್ರದೇಶಕ್ಕೆ ಸ್ಥಳಾಂತರಿಸಬೇಕೆಂದು, ರಸ್ತೆಗೆ ತಾರು ಹಾಕಿಸಬೇಕು ಅಲ್ಲದೆ ರಸ್ತೆ ಬದಿಗೆ ಬೆಳಕನ್ನು ಹಾಕಿಸಬೇಕು. ಕೋಡಿಯ ಆರ್ಥಿಕ ಸಾಮಾಜಿಕ ಬೆಳವಣಿಗೆಗಾಗಿ ಕುಂದಾಪುರದಿಂದ ಪೇಟೆಗೆ ಹಾದು ಹೋಗುವಂತೆ ಹೊಳೆಗೆ ಬ್ರಿಜ್ ಕಟ್ಟಬೇಕೆಂದು ಸಂಬಂಧ ಪಟ್ಟವರನ್ನು ಒತ್ತಾಯಿಸುವುದಕ್ಕೆ ಅವರ ಗಮನಕ್ಕೆ ತರುವುದಕ್ಕೆ ಬೇಕಾಗಿ ತಯಾರಿಸಿದ ಸಾಮೂಹಿಕ ಸಹಿ ಸಂಗ್ರಹದ ಮನವಿಯನ್ನು ಎಂ. ಎಲ್. ಎ. ಮತ್ತು ಅತಿಥಿಗಳಿಗೆ ನೀಡಿ ಸಭೆಗೆ ಓದಿ ಹೇಳಲಾಯಿತು. ಸಭೆಯನ್ನುದ್ದೇಶಿಸಿ ಕಾ. ಶಿವಾನಂದ ಕೋಡಿ, ಅಪ್ಪಣ್ಣ ಹೆಗ್ಡೆ, ಮಾಧವ ಎಂ. ಪೂಜಾರಿ, ಎಡ್ವಿನ್ ಕ್ರಾಸ್ತ ಮಾಣಿ ಗೋಪಾಲ ಮುಂತಾದವರು ಮಾತನಾಡಿದರು.

ಕೋಣಿ ಡಿ.ವೈ.ಎಫ್.ಐ. ಆಶ್ರಯದಲ್ಲಿ ವಾಲಿಬಾಲ್ ಟೂರ್ನಿ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಶನ್, ಕೋಣಿ (ಡಿ.ವೈ.ಎಫ್.ಐ.) ಇದರ 7ನೇ ವಾರ್ಷಿಕೋತ್ಸವದ ಅಂಗವಾಗಿ 1-3-53ರಂದು ಕುಂದಾಪುರದಲ್ಲಿ ನಡೆದ ತಾಲ್ಲೂಕು ಮಟ್ಟದ ವಾಲಿಬಾಲ್ ಟೂರ್ನಿಯಲ್ಲಿ ಕುಂದಾಪುರದ ಅಶೋಕ ಯೂತ್ ಕ್ಲಬ್ 'ಎ' ತಂಡದವರು ಪ್ರಥಮ ಪ್ರಶಸ್ತಿ ಗೆದ್ದುಕೊಂಡರೆಂದು ವರದಿಯಾಗಿದೆ.

ಪಕ್ಷಕ್ಕೆ ಕಾಣಿಕೆ

ಪಾರ್ಟಿಯ ಹಿತೈಷಿಗಳಾದ ಕಾಂ. ರಾಮದಾಸ್ ಭಂಡಾರಿ ಅವರ ಮದುವೆಯು ಇದೇ ಕಾರೀಖು 6-2-83 ಭಾನುವಾರದಂದು ಮೈಸೂರಿನಲ್ಲಿ ನಡೆಯಿತು. ಇವರು ತಮ್ಮ ಮದುವೆಯ ಸವಿ ನೆನಪಿನ ಕಾಣಿಕೆಯಾಗಿ 50 ರೂಪಾಯಿಗಳನ್ನು ಮೈಸೂರು ಜಿಲ್ಲಾ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಾರ್ಟಿಯ ಶಾಖೆಗೆ ನೀಡಿದ್ದಾರೆ.

ಕರ್ನಾಟಕ ರಾಜ್ಯದಲ್ಲಿ

ಸೌಲಭ್ಯವಿಲ್ಲ - ಹೆಚ್ಚಿನ ಹೊರೆ ಮಾತ್ರ

ರೈಲ್ವೇ ಮಂತ್ರಿ ಘನಿಖಾನ್ ಚೌಧರಿಯವರು ಲೋಕಸಭೆಗೆ ಸಲ್ಲಿಸಿದ ರೈಲ್ವೆಯ ಹೊಸ ಅಂದಾಜು ಪತ್ರಿಕೆಯಲ್ಲಿ ಹೆಚ್ಚಿನ ಯಾವ ಸೌಲಭ್ಯವಿಲ್ಲದ ಹೊಸ ಹೊರೆಗಳನ್ನು ಮಾತ್ರ ಕಾಣಬಹುದಾಗಿದೆ. ಜನರ ಪ್ರಯಾಣದ ಟಿಕೇಟಿನ ದರವನ್ನೂ, ಸಾಮಾನುಗಳ ರವಾನೆಯ ದರವನ್ನು ಹೆಚ್ಚಿಸಿ ಸಾಧಾರಣ ರೂ. 500 ಕೋಟಿ ಗಳಿಸುವ ತಂತ್ರ ಘನಿಖಾನ್ ಚೌಧರಿಯವರದ್ದಂತೆ ಕಂಡುಬರುತ್ತದೆ. ಬಹಳಷ್ಟು ಪ್ರತಿಭಟನೆಯ ತರುವಾಯ ಸ್ವಲ್ಪ ರಿಯಾಯಿತಿ ನೀಡುವುದಾಗಿ ಸಾರಿದ್ದಾರೆ

ಕರ್ನಾಟಕದವರೇ ಆದ ಹಿಂದಿನ ಹಲವಾರು ರೈಲ್ವೆ ಮಂತ್ರಿಗಳು ರೈಲ್ವೆ ಅಭಿವೃದ್ಧಿಯದೃಷ್ಟಿಯಿಂದ ಕರ್ನಾಟಕವನ್ನು ಕಡೆಗಣಿಸುತ್ತ ಬಂದಂತೆಯೇ ಕರ್ನಾಟಕದ ರಾಜ್ಯ ಮಂತ್ರಿಯನ್ನು ಹೊಂದಿರುವ(ಜಾಫರ್ ಶರೀಫ್)ರೈಲ್ವೆ ಖಾತೆ ನಮ್ಮ ರಾಜ್ಯದ ಜನತೆಯ ಆಶೋತ್ತರಗಳಲ್ಲಿಯ ಕೆಲವಂಶವನ್ನಾದರೂ ಪೂರೈಸಲು ಮುಂದೆ ಬರಬೇಕಾಗಿತ್ತು. ಆದರೆ ಅದು ಕನ್ನಡಿಗರನ್ನು ನಿರಾಶೆಗೊಳಿಸಿದೆ.

ರಾಜ್ಯದ ಕೇಂದ್ರಕ್ಕೆ ಹೋಗಲು ಬ್ರಾಡ್‌ಗೇಜ್ ರೈಲ್ವೆ ಇಲ್ಲ; ಈಗಿನ ಪರಿಸ್ಥಿತಿಯಲ್ಲಿ 550-600 ಕಿ. ಮಿ. ಪ್ರಯಾಣ ಮಾಡಲು ಇಪತ್ನಾಲ್ಕು ಗಂಟೆ ಬೇಕಾಗುತ್ತದೆಂದು ಗೊತ್ತಿದ್ದೂ ರಾಜ್ಯದಲ್ಲಿರುವ ಮೀಟರ್‌ಗೇಜನ್ನು ಬ್ರಾಡ್‌ಗೇಜಾಗಿ ಪರಿವರ್ತಿಸುವ ಸೂಚನೆ ಬಜೆಟ್‌ನಲ್ಲಿಲ್ಲದಿರುವುದು ಆಶ್ಚರ್ಯವೇ ಸರಿ. ಸೋಲಾಪುರ-ಹುಬ್ಬಳ್ಳಿ, ಮೀರಜ್-ಬೆಂಗಳೂರು, ಹುಬ್ಬಳ್ಳಿ-ಹೊಸಪೇಟೆ, ಬೆಂಗಳೂರು ಮೈಸೂರು, ಅರಸೀಕೆರೆ-ಮೈಸೂರು, ಇವುಗಳಿಗೆಲ್ಲ ಪ್ರಾಧಾನ್ಯ ಕೊಟ್ಟು ಬ್ರಾಡ್‌ಗೇಜಾಗಿ ಪರಿವರ್ತಿಸಬೇಕಾಗಿರುವುದು ಅತ್ಯಗತ್ಯ. ಸೋಲಾಪುರ-ಹುಬ್ಬಳ್ಳಿ. ಮೀರಜ್ - ಬೆಂಗಳೂರು ಇವೆರಡೂ ಈಗಾಗಲೇ ಸರ್ವೇ ಆಗಿದೆ. ಕೆಲಸ ಪ್ರಾರಂಭವಾಗಬೇಕಾಗಿದೆ. ಮಂತ್ರಿ ಚೌಧರಿಯವರು ಇದರಕುರಿತು ಚಕಾರವೆತ್ತಿಲ್ಲ. ನಮ್ಮ ರಾಜ್ಯದ 28 ಸದಸ್ಯರ ಪೈಕಿ ಒಬ್ಬನಾದರೂ ಇದರ ಕುರಿತು ಒಂದು ಶಬ್ದವನ್ನಾದರೂ ಲೋಕಸಭೆಯಲ್ಲಿ ಎತ್ತುವ ಧೈರ್ಯ ಮಾಡಲಿಲ್ಲ. ಹೊಸಪೇಟೆಯಿಂದ ಗುಂತಕಲ್ಲಿನವರೆಗಿರುವ ಬ್ರಾಡ್‌ಗೇಜನ್ನು ಸಾರ್ವಜನಿಕರ ಪ್ರವಾಸಕ್ಕೆ ಉಪಯೋಗ ಮಾಡಬೇಕೆಂದು ಒಬ್ಬ ಸದಸ್ಯ ಪ್ರಶ್ನೆ ಕೇಳಿದಾಗ, ಕಬ್ಬಿಣದ ಅದಿರು ಸಾಗಾಣಿಕೆಗೆ, ಮಾತ್ರ ಅದನ್ನು ಉಪಯೋಗಿಸಲಾಗುವುದೆಂದು ಹೇಳಿರುವುದು ಶುದ್ಧ ಅನ್ಯಾಯ. ಎರಡಕ್ಕೂ ಉಪಯೋಗವಾಗುವಂತೆ ಮಾಡುವುದು ಯೋಗ್ಯ ಮತ್ತು ಅತ್ಯವಶ್ಯ. ಈ ಬೇಡಿಕೆಗಳ ಸಲುವಾಗಿ ಹೋರಾಡಬೇಕು.

ಮುಂದಾಲೋಚನೆಯಿಲ್ಲದ ವಿಚಾರಗಳು

ಹುಬ್ಬಳ್ಳಿ ಕಾರವಾರ ಬ್ರಾಡ್‌ಗೇಜ್ ಮಾರ್ಗಕ್ಕೆ ಈ ಮುಂಚೆಯೇ ಮಾಡಲಾದ ಸರ್ವೆಯನ್ನು ಪುನಹ ಪರಾಮರ್ಶಿಸುವುದು ಹಾಗೆಯೇ ಕಡೂರು-ಚಿಕ್ಕಮಗಳೂರು ಬ್ರಾಡ್ಗೇಜ್ ಮಾರ್ಗದ ಸರ್ವೆ ನಡೆಸುವುದು ಹೊಸ ಬಜೆಟ್ಟಿನಲ್ಲಿ ಸೇರಿಸಲಾಗಿದೆ. ಹುಬ್ಬಳ್ಳಿ-ಕಾರವಾರ ಮಾರ್ಗ ಈ ಮುಂಚೆಯೇ ಸರ್ವೆ ಆಗಿತ್ತು. ಆದರೆ ಮಂಜೂರಾತಿ ಸಿಕ್ಕಿರಲಿಲ್ಲ. ಈಗ ಪುನಃ ಸರ್ವೆ ಮಾಡಲು ಹಣ ವ್ಯಯ ಮಾಡಲಾಗುತ್ತಿದೆ.

ಸೋಲ್ಲಾಪುರ-ಗದಗ, ಮೀರಜ್-ಬೆಂಗಳೂರು ಈಗಾಗಲೇ ಸರ್ವೆ ಮುಗಿದಿದ್ದು, ಮಿತ ಕಾಲದಲ್ಲೇ ಬೆಂಗಳೂರು ತಲುಪಲು ಅನುಕೂಲವಾಗುವಂತೆ ಈ ಎರಡೂ ಮಾರ್ಗಗಳನ್ನು ಬ್ರಾಡ್ಗೆಜ್ ಆಗಿ ಪರಿವರ್ತಿಸುವ ಅಗತ್ಯ ಅತ್ಯವಶ್ಯವಾಗಿತ್ತು. ಇದನ್ನು ಕೈ ಬಿಟ್ಟಿರುವುದು ದೊಡ್ಡ ಅನ್ಯಾಯವೇ ಸರಿ.

ಹದಿನಾಲ್ಕು ಕೋಟಿ (ವರ್ಷ ಹೋದಂತೆ ಅಂದಾಜು ಖರ್ಚು ಹೆಚ್ಚಾಗುತ್ತದೆ) ಖರ್ಚಾಗಬಹುದೆಂದು ಅಂದಾಜು ಮಾಡಿರುವ ಮೈಸೂರು-ಬೆಂಗಳೂರು ಬ್ರಾಡ್‌ಗೇಜ್ ಯೋಜನೆಗೆ ಈ ವರ್ಷ ಬರೇ ರೂ. 50 ಲಕ್ಷ ಮೀಸಲಿಡಲಾಗಿದೆ. ಇಂಥ ಆಮೆ ವೇಗದಲ್ಲಿ ಕಾರ್ಯ ಕೈಗೊಳ್ಳುವುದಾದರೆ, ಯೋಜನೆ ಮುಗಿಯಬೇಕಾದರೆ ಈಗಿನ ಅಂದಾಜಿನಂತೆ ರೂ. 14 ಕೋಟಿ ಅಲ್ಲ, 140 ಕೋಟಿ ಬೇಕಾದೀತು. ಯಾಕೆಂದರೆ ಅಷ್ಟು ತೀವ್ರಗತಿಯಲ್ಲಿ ಬೆಲೆಯೇರುತ್ತಿದೆ.

ಹಾಸನ-ಮಂಗಳೂರು ಮೀಟರ್ ಗೇಜ್ ರೈಲ್ವೆ ಮಾರ್ಗ ನಿರ್ಮಿಸಿ ಸರಕಾರ ಕಾಲುಜಾರಿ ಬಿದ್ದಿದೆ. ವರ್ಷದಲ್ಲಿ ಮೂರು ತಿಂಗಳು ಕೂಡಾ ಈ ಮಾರ್ಗದಲ್ಲಿ ರೈಲು ಓಡಾಡುವುದಿಲ್ಲ. ಒಂದಲ್ಲೊಂದು ಸಮಸ್ಯೆಯನ್ನು ಎದುರಿಸಬೇಕಾಗಿ ಬಂದಿರುವುದು ದುರದೃಷ್ಟಕರ. ಆದರೆ ಹಾಸನ-ಮಂಗಳೂರು ಮಾರ್ಗದಿಂದ ಅನುಭವ ಪಡೆದ ರೈಲ್ವೆ ಖಾತೆ ಹುಬ್ಬಳ್ಳಿ-ಕಾರವಾರ 'ಮಾರ್ಗವನ್ನು ಬ್ರಾಡ್‌ಗೇಜಾಗಿ ಮಾಡಲು ಪುನಃ ಸರ್ವೆ ನಡೆಸಿರುವುದು ಸ್ವಾಗತಾರ್ಹ.

ಯೋಜನೆ ಮಾಡುವಾಗ ಪ್ರಾಧಾನ್ಯತೆ ಯಾವುದಕ್ಕೆ ನೀಡಬೇಕೆಂಬುದು ಅತಿ ಮಹತ್ವದ್ದಾಗಿರುತ್ತದೆ. ಮಂತಗಳಿಕೆಯ ದೃಷ್ಟಿಯಿಂದ ಇದ್ದ ಹಣವನ್ನು ಎಲ್ಲಾ ಕಡೆಗಳಲ್ಲಿ ಹರಿದು ಹಂಚಿಕೊಡುವುದು ಸರಿಯಲ್ಲ. ಅತಿ ಪ್ರಸರಣ, ಬೆಲೆ ಏರಿಕೆ ಲಗಾಮಿಲ್ಲದ ಕುದುರೆಯಂತೆ ಓಡುತ್ತಿರುವಾಗ, ಅವಶ್ಯಕತೆಗಳನ್ನು ನೋಡಿ ಪ್ರಾಧಾನ್ಯತೆಯನ್ನು ನಿರ್ಧರಿಸಿ ಕಾರ್ಯಾರಂಭ ಮಾಡಿದರೆ ಹೆಚ್ಚಿನ ಹಾನಿಗೆ ದಾರಿ ಮಾಡಿಕೊಡುವುದಿಲ್ಲ. ಮತ ಪಡೆಯುವ ಒಂದೇ ಉದ್ದೇಶದಿಂದ ಯೋಜನೆಗಳಿಗೆ ಕೈ ಹಾಕುವ ಇಂದಿರಾ ಸರಕಾರದಿಂದ ಹೆಚ್ಚಿಗೇನನ್ನು ಅಪೇಕ್ಷಿಸಲು ಸಾಧ್ಯ ?

ಕಳ್ಳಬಟ್ಟಿ ದುರಂತ ದೇಸಾಯಿ ಆಯೋಗದ ತೀರ್ಪು

1981 ಜುಲೈ ತಿಂಗಳಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಕಳ್ಳಬಟ್ಟಿ ಕುಡಿದ ಕಾರಣದಿಂದಾಗಿ 336 ಮಂದಿ ಸಾವಿಗೀಡಾಗಿದ್ದು, ಜನರ ಒತ್ತಡಕ್ಕೆ ಬಲಿಯಾಗಿ ಆಗಿನ ಸರಕಾರ ನ್ಯಾಯಮೂರ್ತಿ ಆರ್. ಜಿ ದೇಸಾಯಿ ಅವರ ಆಯೋಗ ನೇಮಿಸಿದ್ದು, ರಾಮಕೃಷ್ಣ ಹೆಗಡೆ ಸರಕಾರ ಆಯೋಗದ ವರದಿಯನ್ನು ಸಾರ್ವಜನಿಕರಿಗಾಗಿ ಬಿಡುಗಡೆ ಮಾಡಿದೆ. ಅಷ್ಟೇ ಅಲ್ಲದೆ ಆಯೋಗದ ವರದಿಯನ್ನು ಒಪ್ಪಿಕೊಂಡು ತಪ್ಪಿತಸ್ಥರ ಮೇಲೆ ಯೋಗ್ಯಕ್ರಮ ಕೈಗೊಳ್ಳಲು ಕೂಡ ನಿರ್ಧರಿಸಿದೆ. ಇದು ಸ್ವಾಗತಾರ್ಹ.

ಹಿಂದಿನ ಕಾಂಗ್ರೆಸ್ ಸರಕಾರ ಸರ್ಕಸ್ ದುರಂತದ ಕುಡೂರಆಯೋಗದ ವರದಿಯನ್ನು ಮುಚ್ಚಿಟ್ಟಿತ್ತು. ಅದನ್ನು ಬಹಿರಂಗಗೊಳಿಸುವ ಜವಾಬ್ದಾರಿಯೂ ಈಗಿನ ಸರ್ಕಾರದ ಮೇಲೆಯೇ ಬಿದ್ದಿತ್ತು ಎಂಬುದನ್ನು ಇಲ್ಲಿ ನೆನೆಸಿಕೊಳ್ಳಬಹುದು.

ಪೋಲೀಸ್ ಮತ್ತು ಅಬ್ಕಾರಿ ಇಲಾಖೆಗಳು ಸೂಕ್ತ ಕ್ರಮ ತೆಗೆದು

(8ನೇ ಪುಟ ನೋಡಿ)

ಮುಂಗಡ ಪತ್ರದ ಹಿನ್ನೋಟ

(2ನೇ ಪುಟದಿಂದ)

1975-76 ರಿಂದ ಹೆಚ್ಚುತ್ತಲೇ ಇದ್ದರೂ, ಅವುಗಳಿಂದ ಬರುವ ಕಂಪನಿ ತೆರಿಗೆಯ ಮೊತ್ತದಲ್ಲಿ ಅನುಕ್ರಮವಾದ ಹೆಚ್ಚಳ ಆಗಲಿಲ್ಲ. ಅದು ಹೆಚ್ಚು ಕಡಿಮೆ 1975-76ರ ಮಟ್ಟದಷ್ಟೇ ಆಗಿದೆ. ಖಾಸಗೀ ಕ್ಷೇತ್ರದ ಅತಿ ದೊಡ್ಡ 10 ಕಂಪೆನಿಗಳಲ್ಲಿ 6 ಕಂಪೆನಿಗಳೂ, ಅತಿ ದೊಡ್ಡ 100 ಕಂಪೆನಿಗಳಲ್ಲಿ 38 ಕಂಪೆನಿಗಳೂ ಸರಕಾರದ ತೆರಿಗೆ ರಿಯಾಯಿತಿಗಳನ್ನು ಪಡೆದು ಕಂಪೆನಿ ತೆರಿಗೆ ಕೊಡಲೇ ಇಲ್ಲ! (1720 ಮಧ್ಯಮ ಹಾಗೂ ಬೃಹತ್ ಕಂಪೆನಿಗಳ ಆದಾಯ ತೆರಿಗೆಗಳ ಸಮೀಕ್ಷೆ : ಇಂಡಿಯಾ ಟುಡೇ : 28-2-83)

ರೂ. 2000 ಕೋಟಿಯಷ್ಟು ಅಬಕಾರಿ ತೆರಿಗೆ ಮತ್ತು ಸುಂಕದ ತೆರಿಗೆ ಹಲವಾರು ವರ್ಷಗಳಿಂದ ಬಾಕಿ ಇದ್ದು ಈಗ ಸುಪ್ರೀಂ ಕೋರ್ಟಿನ ತೀರ್ಪಿಗೆ ಕಾಯುತ್ತಿದೆ. ಚಲಾವಣೆಗೆ ಬರುವ ಪ್ರತಿ ಒಂದು ರೂಪಾಯಿಯ ಬಹುಭಾಗ ಕಪ್ಪು ಹಣವಾಗಿ ಮಾರ್ಪಟ್ಟು ಸಮಾನಾಂತರ ಆರ್ಥಿಕ ವ್ಯವಸ್ಥೆಯು ಪ್ರಬಲವಾಗುತ್ತಿದೆ.

ಆರ್ಥಿಕ ಅಭಿವೃದ್ಧಿ ಮತ್ತು ಸ್ಥಗಿತ ಇಳಿಮುಖ : ಜೀವನಾವಶ್ಯಕ ವಸ್ತುಗಳ ಬೆಲೆ ಏರಿಕೆ, ಆಯವ್ಯಯದಲ್ಲಿ ಕೊರತೆ, ಯೋಜನಾ ವೆಚ್ಚದಲ್ಲಿ ಕಡಿತ, ಸಾರ್ವಜನಿಕ ಕೈಗಾರಿಕಾ ಸಂಸ್ಥೆಗಳಿಗೆ ಸಾಲ ಮರುಪಾವತಿ ಆದೇಶ, ವಿದೇಶಿ ವ್ಯಾಪಾರದಲ್ಲಿ ಕೊರತೆ ಮತ್ತು ವಿದೇಶಿ ವಿನಿಮಯ ಸಂಗ್ರಹಣೆಯಲ್ಲಿ ಇಳಿಮುಖ, ಅಂತರರಾಷ್ಟ್ರೀಯ ಹಣಕಾಸು ಸಂಸ್ಥೆಯ ಕಠಿಣ ಷರತ್ತುಗಳು, ತೆರಿಗೆ ಆದಾಯಗಳಲ್ಲಿ ಇಳಿಮುಖ, ಕಪ್ಪುಹಣದ ಹೆಚ್ಚಳ, ಹೊಸ ಸಾಲ ತೆರಿಗೆ ಕೃತಕ ಹಣ ಸೃಷ್ಟಿ ಇತ್ಯಾದಿ ವಿಧಾನಗಳ ತೀವ್ರ ಇತಿ ಮಿತಿಗಳು, ಮಿತಿಮೀರಿದ ಅಭಿವೃದ್ಧಿ ವೆಚ್ಚ ಅಸಮಾನತೆ. ಭೋಗಜೀವನ, ಭ್ರಷ್ಟಾಚಾರ ಇತ್ಯಾದಿ ವಿದ್ಯಮಾನಗಳಿಂದ ಆರ್ಥಿಕ ಅಭಿವೃದ್ಧಿಯೂ ಸ್ಥಗಿತಗೊಳ್ಳುತ್ತಿದೆ. ಇಳಿಮುಖವಾಗುತ್ತಿದೆ.

1982-83 ಉತ್ಪಾದನಾ ವರ್ಷವೆಂದು ಸಾರಿದ್ದರೂ, ಆಹಾರ ಧಾನ್ಯಗಳ ಉತ್ಪಾದನೆಯು 130ಮಿ. ಟನ್ನುಗಳಿಗೇ ಸೀಮಿತವಾಗಿದ್ದು, ಹಿಂದಿನ ವರ್ಷಕ್ಕಿಂತ 3 ಮಿ. ಟನ್ನುಗಳಷ್ಟು ಕಡಿಮೆಯಾಗಿದೆ. ಬರಗಾಲ ಕಾರಣ ಎಂದು ವಾದಿಸಿದರೂ, 35 ವರ್ಷಗಳ ಯೋಜನಾವಧಿಯಲ್ಲಿಯೂ ನಿಸರ್ಗವನ್ನು ನಿಯಂತ್ರಿಸಲು ಸಾಧ್ಯವಾಗದಿರುವುದನ್ನು ಗಮನಿಸಬೇಕು. ಕೈಗಾರಿಕೋತ್ಪಾದನೆಯ ಅಭಿವೃದ್ಧಿ ದರ 1982-83ರಲ್ಲಿ ಶೇ. 4.0ರಷ್ಟೇ ಆಗಲಿರುವುದೆಂದೂ ಅಂದಾಜು ಮಾಡಲಾಗಿದ್ದು, ಕಳೆದ ವರ್ಷಕ್ಕಿಂತ ಶೇ. 50ರಷ್ಟು ಇಳಿಮುಖವಾಗಿದೆ. ಕೈಗಾರಿಕಾ ಅಶಾಂತಿ ಹೆಚ್ಚುತ್ತಿದ್ದು, 2.5 ಲಕ್ಷ ಮುಂಬಯಿ ಹತ್ತಿಬಟ್ಟೆ ಕಾರ್ಮಿಕರ ಮುಷ್ಕರ 1 ವರ್ಷದ ಅವಧಿಯನ್ನು ದಾಟಿ, ಒಟ್ಟು 1982ರಲ್ಲಿ 75 ಮಿಲಿಯ ಮಾನವ ದಿನಗಳ ನಷ್ಟ ಸಂಭವಿಸಿ ಹೊಸದಾಖಲೆಯಾಗಿದೆ! ವಿದ್ಯುತ್ ಕಡಿತದಿಂದಾಗಿ, ಮುಂದಿನ ವರ್ಷವೂ ಕೈಗಾರಿಕೋತ್ಪಾದನೆಗೆ ಹೆಚ್ಚು ಆಶಾದಾಯಕವಾಗಿತ್ತು. ಜಾಗತಿಕ ಆರ್ಥಿಕ ಹಿಂಜರಿತ ಬಂಡವಾಳಶಾಹಿ ಮಾರ್ಗವನ್ನನುಸರಿಸುತ್ತಿರುವ ಭಾರತದ ಆರ್ಥಿಕ ವ್ಯವಸ್ಥೆಯ ಮೇಲೂ ಸಾಕಷ್ಟು ದುಷ್ಪರಿಣಾಮ ಬೀರುತ್ತಿದೆ. ಪರಿಣಾಮವಾಗಿ, ಈ ಹಣಕಾಸು ವರ್ಷದಲ್ಲಿ ಒಟ್ಟು ಆರ್ಥಿಕ ಅಭಿವೃದ್ಧಿಯ ದರವು ಶೇ.2ಕ್ಕಿಂತಲೂ ಕಡಿಮೆಯಾಗುವ ಭೀತಿ ಇದೆ. ರಾಷ್ಟ್ರದ ಉಳಿತಾಯ ದರವು ಶೇ. 20 ರಷ್ಟಿದ್ದರೂ ಅಭಿವೃದ್ಧಿಯ ದರವು ಶೇ. 2-3ರಷ್ಟೇ ಆಗಿರಲು ಕಾರಣವೇನು ? ಉಳಿತಾಯವು ಅಭಿವೃದ್ಧಿ-ಅನವಶ್ಯಕ ವಿಷಯಗಳಿಗೆ ಹರಿಯಗೊಡುವುದರಿಂದ ಅಭಿವೃದ್ಧಿ ದರವು ಉಳಿತಾಯ ದರಕ್ಕಿಂತ ಭಾರೀ ಹಿಂದುಳಿದಿದೆ. ಸರಕಾರದ ರಕ್ಷಣೆ, ಪೋಲೀಸು, ಆಡಳಿತ ವೆಚ್ಚಗಳು ಮಿತಿಮೀರುತ್ತಿವೆ. ಖಾಸಗಿ ಕ್ಷೇತ್ರದಲ್ಲಿ ಭೋಗಜೀವನಕ್ಕೆ ಭೂಮಿ ಕಟ್ಟಡ, ಚಿನ್ನ ಬೆಳ್ಳಿ ಪಡೆಯಲಿಕ್ಕೆ ಉಳಿತಾಯ ಪೋಲಾಗುತ್ತಿದೆ. ದೇಶದ ಖಾಸಗಿ ವಶದಲ್ಲಿಯೇ 4,000 ಟನ್ ಚಿನ್ನ ಇದೆ ಎಂದು ಜಿನೀವಾ ವಾರ್ತೆ ವರದಿ ಮಾಡಿದೆ! ಉಳಿತಾಯವನ್ನು ವರಮಾನ ಹೆಚ್ಚುವ ಯೋಜನೆಗಳಲ್ಲಿ ತೊಡಗಿಸದೇ ಇರುವುದರಿಂದಲೂ ಆರ್ಥಿಕ ಅಭಿವೃದ್ಧಿಯ ದರವು ಹಿಂದುಳಿದಿದೆ. ಹೆಚ್ಚಿದ ವರಮಾನವೂ ಕಪ್ಪು ಹಣವಾಗಿ, ಸಮನಾಂತರ ಆರ್ಥಿಕ ವ್ಯವಸ್ಥೆಯಾಗಿ ಮಾರ್ಪಡುವುದರಿಂದಲೂ ಅಧಿಕೃತ ಆರ್ಥಿಕ ಅಭಿವೃದ್ಧಿಯ ದರವು ಹಿಂದುಳಿದಿದೆ.

ಬಾಹ್ಯಾಲಂಕಾರದ ಪರಿಹಾರಗಳು:

ಈ ಹಿನ್ನೆಲೆಯಲ್ಲಿ ದೇಶದ ಆರ್ಥಿಕ ಅಭಿವೃದ್ಧಿ ಹೆಚ್ಚಲು, ನಿರುದ್ಯೋಗ, ಬಡತನ, ಅಸಮಾನತೆ, ಅನಕ್ಷರತೆ, ಅನಾರೋಗ್ಯ, ಬೆಲೆ ಏರಿಕೆ, ಹಣದುಬ್ಬರ, ಭ್ರಷ್ಟಾಚಾರ ಹೋಗಲಾಡಿಸಲು ಇಂದಿರಾಗಾಂಧಿ ಇತ್ತೀಚೆಗೆ ಕೈಕೊಂಡ ಕೆಲವು ಬಾಹ್ಯಾಲಂಕಾರದ ಪರಿಹಾರಗಳು ನಿಷ್ಪ್ರಯೋಜನವಾಗುವುವು. ಉದಾಹರಣೆಗೆ, ಪಕ್ಷದ ಅಧ್ಯಕ್ಷಸ್ಥಾನದ ಹೊಣೆಗಾರಿಕೆಯನ್ನು ನಿಷ್ಪ್ರಯೋಜಕ ಮುದುಕ ರಾಜಕಾರಣಿ ಕಮಲಾಪತಿ ತ್ರಿಪಾಠಿಯೊಂದಿಗೆ ಹಂಚಿಕೊಂಡದ್ದು. ಮಗ ರಾಜೀವಗಾಂಧಿಯನ್ನು ಪಕ್ಷದ ಪ್ರಧಾನ ಕಾರ್ಯದರ್ಶಿಯನ್ನಾಗಿ ನೇಮಿಸಿದ್ದು; ಮಂತ್ರಿಮಂಡಳಿಯನ್ನು ಬದಲಾಯಿಸಿದ್ದು, ಮಂತ್ರಿ ಶಾಖೆಗಳಿಗೂ, ರಾಜ್ಯ ಸರಕಾರಗಳಿಗೂ ವಿದೇಶಿ ರಾಯಭಾರಿ ಕಛೇರಿಗಳಿಗೂ ಮಿತವ್ಯಯದ ಗಿಳಿಪಾಠ ನೀಡಿದ್ದು, ರೈಲ್ವೆ ಮಂಡಳಿಯನ್ನು ಪುನರ್ರಚಿಸಿದ್ದು ರೈಲ್ವೆ ವರಿಷ್ಠ ಅಧಿಕಾರಿಗಳನ್ನು ಬಲಾತ್ಕಾರವಾಗಿ ವರ್ಗಾಯಿಸಿದ್ದು, ವಿಶೇಷ ಆರ್ಥಿಕ ಸಲಹಾ ಮಂಡಳಿಯನ್ನು ರಚಿಸಿದ್ದು, ಇತ್ಯಾದಿಗಳೆಲ್ಲಾ ಹೊಸ ಬಾಟ್ಲಿಗೆ ಹಳೆಯ ಮದ್ಯ ತುಂಬಿದಂತೆಯೇ ಸರಿ! ಇಂದಿರಾ ಗಾಂಧಿಯ ಎಲ್ಲಾ ಚಿತ್ರಗಳು ಬತ್ತಳಿಕೆಯಿಂದ ಬರಿದಾಗಿವೆ ಈ ಸಂದಿಗ್ಧ ಪರಿಸ್ಥಿಯಲ್ಲಿ ದೇಶದ ಬಡ ಹಾಗೂ ಪ್ರಜಾಪ್ರಭುತ್ವ ಶಕ್ತಿಗಳು ಮೂಲಭೂತವಾದ ಸಾಮಾಜಿಕ, ಆರ್ಥಿಕ ರಾಜಕೀಯ ಪರ್ಯಾಯ ಕಾರ್ಯಕ್ರಮಗಳನ್ನು ಮುಂದಿಟ್ಟು ಜನರ ಬೆಂಬಲಗಳಿಸಬೇಕು. ಆರ್ಥಿಕ ದುಃಸ್ಥಿತಿಯ ಎಲ್ಲಾ ದುಷ್ಪರಿಣಾಮಗಳಿಂದ ದುಡಿಯುವ ಜನರನ್ನು ರಕ್ಷಿಸಲು ಸಂಘಟಿತ ಹೋರಾಟ ನಡೆಸಬೇಕು.

ರೈತ ಸಂಘದ ಪ್ರತಿನಿಧಿಗಳ ಮಾತುಕತೆ

ಒಂದನೇ ಪುಟದಿಂದ

ಕರ್ನಾಟಕ ಪ್ರಾಂತ ರೈತ ಸಂಘ ರಾಜ್ಯದಲ್ಲಿ ಇತ್ತೀಚಿಗಿನ ಹೋರಾಟದಲ್ಲಿ ನಿರ್ವಹಿಸಿದ ಪಾತ್ರವನ್ನು, ಚುನಾವಣೆಯಲ್ಲಿ ಕಾಂಗ್ರೈಯನ್ನು ಸೋಲಿಸಲು ಶ್ರಮಿಸಿದುದನ್ನು ಮುಖ್ಯ ಮಂತ್ರಿಗಳಿಗೆ ಜ್ಞಾಪಿಸಿಕೊಡುತ್ತಾ ರೈತರ ಹೋರಾಟವನ್ನು ವಿಸ್ತೃತ ಪ್ರಜಾಸತ್ತಾತ್ಮಕ ಹೋರಾಟದೊಂದಿಗೆ ಸಮ್ಮಿಳನಗೊಳಿಸಿದುದನ್ನು ಒತ್ತಿ ಹೇಳಿ ಕರ್ನಾಟಕ ಪ್ರಾಂತ ರೈತ ಸಂಘ ಮಾತ್ರ ರೈತರ ಅದರಲ್ಲೂ ಮುಖ್ಯವಾಗಿ ಬಡರೈತ ಕೂಲಿಕಾರರ ಹಿತಾಸಕ್ತಿಯನ್ನು ಜವಾಬ್ದಾರಿಯುತ ರೀತಿಯಲ್ಲಿ ಪ್ರತಿನಿಧಿಸುತ್ತದೆಂದು ಹೇಳಿದ್ದಕ್ಕೆ ಮುಖ್ಯಮಂತ್ರಿಗಳು ಹೌದೆಂದು ಕರ್ನಾಟಕ ಪ್ರಾಂತ ರೈತ ಸಂಘದ ಪಾತ್ರವನ್ನು ಶ್ಲಾಘಿಸುವ ರೀತಿಯಲ್ಲಿ ಒಪ್ಪಿಗೆ ಸೂಚಿಸಿದರು.

ಕಾಂಗ್ರೈ ಪ್ರಪ್ರಥಮ ಭಾರಿಗೆ ಸೋತು ಜನತಾರಂಗ ಗೆದ್ದು ಶ್ರೀ ರಾಮಕೃಷ್ಣಹೆಗ್ಗಡೆಯವರು ಮುಖ್ಯ ಮಂತ್ರಿಯಾಗಿರುವುದಕ್ಕೆ ಅವರನ್ನು ಕರ್ನಾಟಕ ಪ್ರಾಂತ ರೈತ ಸಂಘವು ಸಮಕ್ಷಮ ಅಭಿನಂದಿಸಿದೆ.

ಇದೇ ರಾಜ್ಯದ ರೈತರ ಅದರಲ್ಲೂ ಮುಖ್ಯವಾಗಿ ಕೃಷಿ ಕೂಲಿಗಾರರ ಬೇಡಿಕೆಗಳನ್ನು ಒಟ್ಟು 42 ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ಸಲ್ಲಿಸಲಾಗಿದೆ. ಕೃಷಿ ಕೂಲಿಗಾರ, ಸಾಲ ಕೃಷಿ ಹುಟ್ಟುವಳಿಗಳಿಗೆ ಬೆಲೆ, ಮಾರಾಟ ಬರಗಾಲ-ನೆರೆ ಪರಿಹಾರ, ಗ್ರಾಮೀಣ ಅಭಿವೃದ್ಧಿ ಇಂತಹ ಹಲವಾರು ಪ್ರಶ್ನೆಗಳಿಗೆ ಸಂಬಂಧಿಸಿ ಪರಿಹಾರ ಕೇಳಲಾಗಿದೆ. (ಮನವಿ ಪತ್ರದಲ್ಲಿ ಬೇಡಿಕೆಗಳನ್ನು ಪಟ್ಟಿ ಮಾಡಲಾಗಿದೆ.)

ಮುಖ್ಯವಾಗಿ ರಾಜ್ಯದಲ್ಲಿ ಬಡರೈತರು ಕೃಷಿ ಕೂಲಿಕಾರರು ಹಲವಾರು ವರ್ಷಗಳಿಂದ ಲಕ್ಷಾಂತರ ಎಕರೆ ಭೂಮಿ ಹಿಡಿದು ಕೃಷಿಯಲ್ಲಿ ತೊಡಗಿದ್ದವರಿಗೆ ಪಟ್ಟಾ ನೀಡಬೇಕೆನ್ನುವ ಬೇಡಿಕೆಯನ್ನು ಖಂಡಿತ ಪರಿಶೀಲಿಸುವುದಾಗಿ ಮತ್ತು ಇತ್ಯರ್ಥಗೊಳಿಸಲಾಗುವುದೆಂದು ಆಶ್ವಾಸನೆ ನೀಡಿದರು. ಆದರೆ ಇದೇ ಸಂದರ್ಭದಲ್ಲಿ ಶ್ರೀಮಂತ ರೈತರು ಇಂತಹ ಬಂಜರು ಮತ್ತು ಅರಣ್ಯ ಭೂಮಿಯನ್ನು ತೆಗೆದುಕೊಂಡು ದುರ್ಲಾಭ ಪಡೆದುಕೊಳ್ಳುವಂತಾಗಬಾರದೆಂದು ಆತಂಕ ವ್ಯಕ್ತಪಡಿಸಿದರು.

ಕೃಷಿ ಕೂಲಿಕಾರರ ಕನಿಷ್ಟ ಕೂಲಿಯನ್ನು ಉಳಿದ ವಿಭಾಗದ ಕೆಲಸಗಾರರೊಂದಿಗೆ ನಿಗದಿಪಡಿಸಲಾಗುವುದೆಂದು ಆ ಬಗ್ಗೆ ಸಮಿತಿಯೊಂದನ್ನು ರಚಿಸಿ ಆದಷ್ಟು ಬೇಗ ಹೆಚ್ಚಿನ ಕನಿಷ್ಟ ಕೂಲಿ ನಿಗದಿಪಡಿಸಿಜಾರಿಗೆ ತರಲಾಗುವುದೆಂದು ಖಚಿತಪಡಿಸಿದರು.

ಭೂನ್ಯಾಯ ಮಂಡಳಿ, ಭೂ ವಿತರಣಾ ಸಮಿತಿಗಳಲ್ಲಿ ಆಯಾ ಕ್ಷೇತ್ರಗಳ ಎಂ.ಎಲ್.ಎ.ಗಳು ಅದರ ಸದಸ್ಯರಾಗಬೇಕೆನ್ನುವ ನಿರ್ಣಯ ಸರ್ಕಾರ ಕೈಗೊಂಡಿರುವುದರಿಂದ ತಾತ್ವಿಕವಾಗಿ ಎಲ್ಲ ಪಕ್ಷಗಳ ಪ್ರತಿನಿಧಿಗಳನ್ನೊಳಗೊಂಡಂತಾಯಿತೆಂದು ಹೇಳಿದ ಮುಖ್ಯಮಂತ್ರಿಗಳು ರೈತರ ಪ್ರತಿನಿಧಿಗಳನ್ನೂ ಸಹ ಸೇರಿಸುವ ಉದ್ದೇಶವನ್ನು ಒಪ್ಪಿಕೊಂಡು ಅವರು ಕರ್ನಾಟಕ ಪ್ರಾಂತ ರೈತ ಸಂಘದ ಪ್ರತಿನಿಧಿಗಳನ್ನು ಪಟ್ಟಿಮಾಡಿ ನೀಡಲು ಕೇಳಿಕೊಂಡರು.

ಕರ್ನಾಟಕ ಪ್ರಾಂತ ರೈತ ಸಂಘದ ಘಟಕಗಳು ಹೋರಾಟ ನಡೆಸಿದ ಸಂದರ್ಭದಲ್ಲಿ ಗುಂಡೂರಾವ್ ಸರ್ಕಾರ ಹಾಕಲಾಗಿದ್ದ ಕೇಸುಗಳನ್ನು ಮುಖ್ಯವಾಗಿ ತಾತಗುಣಿ ಎಸ್ಟೇಟ್, ಧಾರವಾಡ ಕೃಷಿ ಕಾಲೇಜ್, ಹಳಿಯಾಳ, ಬಾಗೇಪಲ್ಲಿ, ಬಿಜಾಪುರ, ಮುಂತಾದ ಸ್ಥಳಗಳಲ್ಲಿ ಕರ್ನಾಟಕ ಪ್ರಾಂತ ರೈತ ಸಂಘದ ಕಾರ್ಯಕರ್ತರ ಮೇಲೆ ಹಾಕಿರುವ ಎಲ್ಲ ಕೇಸುಗಳನ್ನು ಹಿಂತೆಗೆದುಕೊಳ್ಳುವಂತೆ ಆದೇಶ ನೀಡುವುದಾಗಿ ಮುಖ್ಯಮಂತ್ರಿಗಳು ಕರ್ನಾಟಕ ಪ್ರಾಂತ ರೈತ ಸಂಘಕ್ಕೆ ಭರವಸೆ ನೀಡಿನರು.

ಉಳಿದೆಲ್ಲಾ ಬೇಡಿಕೆಗಳನ್ನು ಸಹಾನುಭೂತಿ ಪರವಾಗಿ ಪರಿಶೀಲಿಸಿ, ಪರಿಹರಿಸುವಲ್ಲಿ ಪ್ರಯತ್ನಿಸುತ್ತೇವೆಂದು ಮುಖ್ಯಮಂತ್ರಿಗಳು ಕರ್ನಾಟಕಪ್ರಾಂತ ರೈತ ಸಂಘಕ್ಕೆ ಆಶ್ವಾಸನೆ ನೀಡಿದರು. ಹೆಗ್ಗಡೆಯವರ ಸರ್ಕಾರದ ಅವರ ಎಲ್ಲಾ ಪ್ರಗತಿಪರ, ರೈತ ಪರ ಕ್ರಮಗಳಿಗೆ ಕರ್ನಾಟಕಪ್ರಾಂತ ರೈತ ಸಂಘವು ಬೆಂಬಲಕೊಡುವುದಾಗಿ ಮುಖ್ಯಮಂತ್ರಿಗಳಿಗೆ ಭರವಸೆ ನೀಡಲಾಗಿದೆ.

ಕಾಂಗ್ರೈ ಸೋತು ರಾಜ್ಯದಲ್ಲಿ ಹೊಸ ಪರಿಸ್ಥಿತಿ ಮೂಡಿ ಬಂದಿರುವುದು ಕರ್ನಾಟಕ ಪ್ರಾಂತ ರೈತ ಸಂಘವು ಗಣನೆಗೆ ತೆಗೆದುಕೊಂಡು ಹೊಸ ಸರ್ಕಾರಕ್ಕೆ ಬೆಂಬಲ ಕೊಡುವ ಸಂದರ್ಭದಲ್ಲಿ ಅದು ರೈತ ಪರ ನೀತಿಯನ್ನು ಅನುಸರಿಸಲು, ರೈತರ, ರೈತ ಕೂಲಿಗಾರರ ಬೇಡಿಕೆ ; ಸಮಸ್ಯೆಗಳನ್ನು ಬಗೆಹರಿಸಲು ಕರ್ನಾಟಕ ಪ್ರಾಂತ ರೈತ ಸಂಘವು ಆಗ್ರಹಪಡಿಸುತ್ತದೆ.

ಒಂದು ವೇಳೆ ಶ್ರೀ ರಾಮಕೃಷ್ಣ ಹೆಗ್ಗಡೆಯವರ ಸರ್ಕಾರವೂ ಕೂಡ ರೈತರ ಮತ್ತು ಮುಖ್ಯವಾಗಿ ಕೃಷಿ ಕೂಲಿಗಾರರ ಬೇಡಿಕೆಗಳನ್ನು ಕಡೆಗಣಿಸಿ ನಿರ್ಲಕ್ಷಿಸಿದ್ದಾದರೆ ಕರ್ನಾಟಕ ಪ್ರಾಂತ ರೈತ ಸಂಘವೂ ಸಹ ಬೇಡಿಕೆಗಳಿಗೆ ಒತ್ತಾಯಿಸಿ ಹೋರಾಡುವುದು ಅನಿವಾರ್ಯವಾಗುತ್ತದೆ.

(ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ವಿ. ಎನ್. ಹಳಕಟ್ಟಿಯವರು ನೀಡಿರುವ ಪತ್ರಿಕಾ ಹೇಳಿಕೆ)

ಕಾರ್ಮಿಕ ಇಲಾಖೆಯ ವಿಳಂಬ ನೀತಿ ಪ್ರೆಸ್ ಕೆಲಸಗಾರರ ಖಂಡನೆ

ಕೆಲವೊಂದು ಪ್ರೆಸ್ ಮಾಲಿಕರು ಕಾರ್ಮಿಕರಿಗೆ ನ್ಯಾಯವಾಗಿ ಕೊಡಬೇಕಾದ ಸವಲತ್ತುಗಳನ್ನು ವಂಚಿಸುವುದನ್ನು ಪ್ರೆಸ್ ವರ್ಕರ್ಸ್ ಯೂನಿಯನ್ ಸಂಬಂಧಪಟ್ಟ ಕಾರ್ಮಿಕ ಅಧಿಕಾರಿಗಳಿಗೆ ದೂರು ಕೊಟ್ಟರೂ ಈ ಅಧಿಕಾರಿಗಳು ಯಾವುದೇ ಕ್ರಮ ಕೈಗೊಳ್ಳದಿರುವುದನ್ನು ತಾ॥ 22-2-83 ರಂದು ಸೇರಿದ ಸೌತ್ ಕೆನರಾ ಪ್ರೆಸ್ ವರ್ಕರ್ಸ್ ಯೂನಿಯನ್ (ಸಿ. ಐ. ಟಿ. ಯು.) ಕಾರ್ಯಕಾರೀ ಸಮಿತಿಯು ಖಂಡಿಸಿದೆ. ಅದಲ್ಲದೆ ಮಂಗಳೂರಿನ ಲೇಬರ್ ಆಫೀಸಿನಲ್ಲಿ ಒಂದು ಲೇಬರ್ ಆಫೀಸರ ಹುದ್ದೆ ಖಾಲಿ ಇದ್ದು ಈ ಸ್ಥಾನಕ್ಕೆ ತಕ್ಷಣ ನೇಮಿಸಬೇಕೆಂದೂ ಸರ್ಕಾರವನ್ನು ಒತ್ತಾಯಿಸುತ್ತದೆ.

ಮಂಗಳೂರಿನಲ್ಲಿರುವ ಫ್ಯಾಕ್ಟರಿ ಇನ್ಸ್‌ಪೆಕ್ಟರರ ಕಚೇರಿಗೆ ಸಂಬಂಧಪಟ್ಟ ಇನ್ಸ್‌ಪೆಕ್ಟರರುಗಳನ್ನು ತಕ್ಷಣ ನೇಮಿಸಬೇಕೆಂದು ಸರ್ಕಾರವನ್ನು ಒತ್ತಾಯಿಸಲು ನಿರ್ಣಯಿಸಲಾಯಿತು.

ಕಳೆದ 2 ವರ್ಷಗಳಿಂದ ಪ್ರೆಸ್ ಕೆಲಸಗಾರರಿಗೆ ಪ್ರಾವಿಡೆಂಟ್ ಫಂಡಿನ ರಶೀದಿ ಬರದೆ ಇದ್ದುದನ್ನು ಗಮನಿಸಿ ಈ ಸಂಬಂಧ ತಕ್ಷಣ ಗಮನಹರಿಸಬೇಕೆಂದು ಪ್ರಾದೇಶಿಕ ಉಪ - ಪ್ರಾವಿಡೆಂಟ್ ಫಂಡ್ ಕಮೀಷನರ್‌ರನ್ನು ಒತ್ತಾಯಿಸಲು ತೀರ್ಮಾನಿಸಲಾಯಿತು.

ಕಾನೂನುಬಾಹಿರವಾಗಿ 30 ಮಂದಿ ಸ್ತ್ರೀ ಮಜೂರರನ್ನು ಕೆಲಸದಿಂದ ವಜಾ ಮಾಡಿದುದರ ವಿರುದ್ಧ ದಿ. 14-3-83 ರಿಂದ ಮುಷ್ಕರ ನಡೆಸುತ್ತಿರುವ ಮಂಗಳೂರಿನ "ಕೇಂಪ್ಕೊ" ಅಡಿಕೆ ಸಂಸ್ಥೆಯ ಕೆಲಸಗಾರರ ಮುಷ್ಕರಕ್ಕೆ ಬೆಂಬಲ ನೀಡುವ ಹಾಗೂ ಈ ವಿವಾದವನ್ನು ತಕ್ಷಣ ಇತ್ಯರ್ಥಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸುವ ನಿರ್ಣಯ ಕೈಗೊಳ್ಳಲಾಯಿತು.

ಪರಿಸರ

* ತೈಲ ರಫ್ತು ಮಾಡುವ ದೇಶಗಳ ಸಂಘಟನೆ ತೈಲ ಬೆಲೆಯನ್ನು ಬ್ಯಾರಲ್‌ಗೆ 34 ಡಾಲರ್‌ನಿಂದ 29 ಡಾಲರ್‌ಗೆ ಇಳಿಸಲು ನಿರ್ಧರಿಸಿದೆ. ಹಾಗೆನೇ ಉತ್ಪಾದನೆಯನ್ನು 17.5 ಮಿಲಿಯ ಬ್ಯಾರಲ್‌ಗಳಿಗೆ ಸೀಮಿತಗೊಳಿಸಲು ನಿಶ್ಚಯಿಸಲಾಗಿದೆ. ಈ ಸಂಘಟನೆಯ 22 ವರ್ಷದ ಇತಿಹಾಸದಲ್ಲೇ ಮೊತ್ತಮೊದಲ ಬಾರಿಗೆ ಇಂತಹ ಕ್ರಮ ಕೈಗೊಳ್ಳಲಾಗಿದೆ.

—ಲಂಡನ್, ಎ.ಪಿ. ಮಾ. 14

* ಬಿಲಾಸ್‌ಪುರ ಜಿಲ್ಲೆಯ ಕೊರಬಾ ಹಳ್ಳಿಯ ಸುತ್ತ ಮುತ್ತಲು ನಡೆದ ಕೊಲೆಯೊಂದರ ಬಗ್ಗೆ ಅನ್ವೇಷಣೆಗೆ ಹೋದ ಪೋಲೀಸ್ ತಂಡ ಸುಮಾರು 5 ದಿನಗಳಷ್ಟು ಇಡೀ ಹಳ್ಳಿಯ ಜನರನ್ನು ಬರ್ಬರ ರೀತಿಯಲ್ಲಿ ಹಿಂಸಿಸುದುದಾಗಿ ವರದಿಯಾಗಿದೆ. ಈ ಐದು ದಿನಗಳಲ್ಲಿ ಕಂಡ ಕಂಡವರನ್ನೆಲ್ಲಾ ಹೆಂಗಸರು ಮಕ್ಕಳೆನ್ನದೆ ಬಡಿದರು. ಹಲವು ಹಳ್ಳಿಗರನ್ನು ಅತ್ಯಾಚಾರಗೊಳ ಮಾಡಿದರು. ಹಲವು ಮಹಿಳೆಯರನ್ನು ನಗ್ನಗೊಳಿಸಲಾಯಿತು. ಹಳ್ಳಿಯ ಇಬ್ಬರನ್ನು ನಗ್ನವಾಗಿ ಮೆರವಣಿಗೆ ಮಾಡಿದ್ದಲ್ಲದೆ ಪರಸ್ಪರ ಮರ್ಮಾಂಗ ಹಿಡಿದುಕೊಳ್ಳಲು ಬಲಾತ್ಕಾರ ಮಾಡಿದರು, ಹಳ್ಳಿಗರೆಲ್ಲಾ ಸೇರಿ 13459ರೂ. ಸೇರಿಸಿ ಕೊಟ್ಟಾಗಲೇ ಈ ಹಿಂಸಾಚಾರ ನಿಲ್ಲಿಸಲಾಯಿತು.

ಇ.ಎನ್.ಎಸ್. ಮಾ, 13

ಸೌಲಭ್ಯವಿಲ್ಲ-ಹೆಜ್ಜಿನ ಹೊರೆ ಮಾತ್ರ

(7ನೇ ಪುಟದಿಂದ)

ಕೊಳ್ಳುವಲ್ಲಿ ವಿಫಲವಾಗಿವೆ ಎಂದು ದೇಸಾಯಿ ವರದಿ ತನ್ನ ಅಭಿಪ್ರಾಯ ವ್ಯಕ್ತಮಾಡಿದೆ. ಅಷ್ಟೊಂದು ಮಂದಿಯನ್ನು ಬಲಿ ತೆಗೆದುಕೊಳ್ಳಲು ಮೆಥನಾಲ್ ಕಾರಣವೆಂದೂ ಆಗಿನ ಅಬಕಾರಿ ಕಮೀಷನರ್ ಬಿ. ಕೆ. ಭಟ್ಟಾಚಾರ್ಯರನ್ನೊಳಗೊಂಡು ಹಲವಾರು ಅಧಿಕಾರಿಗಳು ಈ ದುರಂತಕ್ಕೆ ಕಾರಣರಾಗಿದ್ದಾರೆಂದೂ ಆಯೋಗ ತನ್ನ ವರದಿಯಲ್ಲಿ ಆರೋಪಿಸಿದೆ.

ನಮ್ಮ ರಾಜ್ಯ ಅಷ್ಟೇ ಅಲ್ಲ ಇಡೀ ದೇಶದಲ್ಲಿ ಜನಜೀವನದ ಮೇಲೆ ಕಳ್ಳಬಟ್ಟಿ ಹೇಳಲಾರದಂಥ ಹಾನಿಯನ್ನುಂಟು ಮಾಡುತ್ತಿದೆ. ದಿನನಿತ್ಯ ಸಾವಿರಾರು ಬಡಜನರ ಸಾವಿಗೆ ಕಾರಣವಾಗಿದೆ. ಬಂಡವಾಳಶಾಹಿ ಸಮಾಜದ ದುರ್ಗುಣಗಳು ಹಾಗೆಯೇ ಬಂಡವಾಳಶಾಹಿ ಸರಕಾರದ ಆರ್ಥಿಕ. ಸಾಮಾಜಿಕ ನೀತಿಯೇ ಕಳ್ಳಬಟ್ಟಿ ಉದ್ಯೋಗ. ಈ ರೀತಿ ಹೀನಾಯವಾಗಿ ವರ್ತಿಸಲು ಮುಖ್ಯ ಕಾರಣ. ಮಟ್ಕಾ ಆಟವೂ ಇದಕ್ಕೆ ಪೂರಕವಾಗಿ ಬೆಳೆಯುತ್ತಿದೆ. ಭ್ರಷ್ಟಾಚಾರ ಮಹಿಳೆಯರ ಮಾನಭಂಗಗಳೆಲ್ಲ ಇದರೊಡನೆ ಜೋತಾಡುತ್ತಿದೆ.

ಇಂದಿರಾ ಕಾಂಗ್ರೆಸ್ಸಿನವರಿಗೆ ಕಳ್ಳಬಟ್ಟಿ ತಯಾರಕರ ಮತ ಬೇಕು. ಮಟ್ಕಾ ದೊರೆಗಳ ಹಣ ಬೇಕು. ಆದ್ದರಿಂದಲೇ ಇವೆರಡೂ ರಾಹು-ಕೇತುಗಳಂತೆ ಸಮಾಜವನ್ನು ಅದರಲ್ಲೂ ಕೆಳದರ್ಜೆಯ ಬಡ-ಮಧ್ಯಮ ವರ್ಗದವರನ್ನು ಕಾಡುತ್ತಿವೆ, ಕೆಣಕುತ್ತಿದೆ. ನಾಶ ಮಾಡುತ್ತಿದೆ. ಕಳ್ಳಬಟ್ಟಿ ಮತ್ತು ಮಟ್ಕಾ ರಾಜಕೀಯವಾಗಿರುವ ತನಕ ಅವುಗಳನ್ನು ನಾಶಗೊಳಿಸಲುಸಾಧ್ಯವೇ ಇಲ್ಲ. ಆದ್ದರಿಂದ ಅಧಿಕಾರಿಗಳನ್ನು ಪೋಲೀಸರನ್ನಷ್ಟೇ ದೂರುವುದರಿಂದಲೂ ಈ ಸಮಸ್ಯೆ ಬಗೆಹರಿಯಲು ಶಕ್ಯವಿಲ್ಲ. ಇದಕ್ಕೆಲ್ಲ ರಾಜಕೀಯ ನಿಲುವಿನ ನಿರ್ಣಯ ಬೇಕು.

ಬಳ್ಳಾರಿಯ ದುರಂತಕ್ಕೆ ಮುಖ್ಯ ಕಾರಣ ಮಟ್ಕಾ ದೊರೆಗಳೇ ಆಗಿರಬೇಕೆಂದು ಸಂಶಯಪಡುತ್ತಿರುವಾಗಲೇ ಮಟ್ಕಾ ಹಾವಳಿಯನ್ನು ರಾಜ್ಯದಿಂದ ದೂರಸರಿಸಿಯೇ ತೀರುತ್ತೇನೆಂದು ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರು ಈಗಾಗಲೇ ಸಾರಿದ್ದಾರೆ ಮತ್ತು ಅಲ್ಲಲ್ಲಿ ಕ್ರಮಗಳೂ ನಡೆದಿವೆ. ಅವುಗಳ ಪರಿಣಾಮವನ್ನು ಕಾದು ನೋಡಬೇಕಾಗಿದೆ.

ದೇಸಾಯಿ ಆಯೋಗ ತನ್ನ ವರದಿ ಸಲ್ಲಿಸಿದೆ. ಅಧಿಕಾರಿಗಳ ಮಟ್ಟದಲ್ಲಷ್ಟೇ ಅದು ತನ್ನ ಪ್ರತಿಕ್ರಿಯೆ ವ್ಯಕ್ತ ಮಾಡಬಹುದಷ್ಟೇ ಅಲ್ಲದೆ, ರಾಜಕೀಯ ವಿಶ್ಲೇಷಣೆ ಮಾಡಲು ಅದಕ್ಕೆ ಸಾಧ್ಯವಿಲ್ಲ. ನಾವು ಅದನ್ನು ಅಪೇಕ್ಷಿಸುವುದೂ ತಪ್ಪು. ಆದರೆ ಆಳುವ ಪಕ್ಷದ ನೀತಿಯನ್ನೇ ಅಧಿಕಾರಿಗಳುಅನುಸರಿಸುತ್ತಿರುತ್ತಾರೆ. 'ಅವರ ರಕ್ಷಣೆಗೆ ಬರುವವರು ಮಂತ್ರಿಗಳು. ಆದ್ದರಿಂದ ಮಂತ್ರಿಗಳು ಯಾರೇ ಇರಲಿ ಅಧಿಕಾರಿಗಳು ತಮ್ಮ ಕರ್ತವ್ಯ ಪೂರೈಸಬೇಕೆಂದು ಹೇಳುವಾಗಲೇ ರಾಜಕೀಯ ಒತ್ತಡ ಕಾರ್ಯ ನಿರ್ವಹಣೆಯಲ್ಲಿ ಅಡ್ಡಿ ಬರುತ್ತದೆಂಬುದನ್ನು ಮರೆಯುವಂತಿಲ್ಲ.

ಸರ್ಕಾರ ಜನರ ಭಾವನೆಗಳನ್ನು ಸರಿಯಾಗಿ ಅರ್ಥ ಮಾಡಿಕೊಂಡು, ಕಾರ್ಯಪ್ರವೃತ್ತರಾಗುವುದು ಅತ್ಯಗತ್ಯ.

ಕುಡೂರ ಆಯೋಗದಲ್ಲಿ ಟೀಕೆಗೊಳಗಾದ ಗರುಡಾಚಾರ್ ಅವರಿಗೆ ಭಡ್ತಿ ನೀಡಿರುವುದು ಅಸಮ್ಮತಿಗೆ ಅವಕಾಶ ಮಾಡಿಕೊಟ್ಟಿದೆ. ಅಂಥ ಸಂದರ್ಭಗಳಲ್ಲಿ ಬಹಳ ಚಾಕಚಕ್ಯತೆಯಿಂದ ವರ್ತಿಸುವುದು, ಕ್ರಮ ತೆಗೆದುಕೊಳ್ಳುವುದು ಅತ್ಯಗತ್ಯ. ಗೆಳೆಯ ಪಾರ್ಟಿಯ ಮುಖಂಡರೊಡನೆ ಸಮಾಲೋಚಿಸಿ ನಿರ್ಣಯ ತೆಗೆದುಕೊಳ್ಳುವ ಪದ್ಧತಿ ಅನುಸರಿಸಿಕೊಂಡು ಹೋಗುವುದು ಯೋಗ್ಯ. ಅನಾವಶ್ಯಕ ಟೀಕೆಗಳನ್ನು ತಪ್ಪಿಸಲು, ಹೆಚ್ಚೆಚ್ಚು ಒಮ್ಮತ ಸಾಧಿಸಲು ಆ ಕ್ರಮ ಸಹಾಯವಾಗಬಹುದು

Printed & Published by P. Ramachandra Rao by him on behalf of the Communist Party of India (Marxist) Karnataka State Committee L-56 K. V. Temple Street Sultanpet, Bangalore 560 053. Editorial and managerial office : L-56, K. V. Temple Street, Sultanpet, B-53. Phone : 2415 Printed at Karnataka Pressmen Associates (P) Limited, 54/1, K. R. Road, Bangalore-4 Editor : P. RAMACHANDRA RAO